# ಚಿನ್ನದ ಸೇತುವೆ

ಅಖಿಲ ಭಾರತ ಪತ್ರಿಕೆ

ಏಪ್ರಿಲ್ 2016

ಬೆಲೆ : 15/-



*Let us find, O Lord,*
*our entire support in Thy Grace alone.*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.


**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ಚಿನ್ನದ ಸೇತುವೆ"

**ಅನು : ಡಾ. ಕೆ.ಎಸ್. ಆಮೂರ**
ಶ್ರೀಮಾತೆಯವರು ಹಾಗೂ ಅತಿಮಾನಸ ಅವರೋಹಣ 3
ದೂರದಲ್ಲಿರುವುದು ಮಹತ್ವದ್ದಲ್ಲ 5
ಮನುಕುಲದೊಂದಿಗೆ ದೈವೀ ವ್ಯವಹಾರ 7
**ಅನು : ಶ್ರೀ ಪುರುಷೋತ್ತಮ ಗಲಗಲಿ**
ಅವಶ್ಯವಾದ ಪ್ರಯತ್ನ 11
**ಅನು : ಡಾ. ಕೆ.ಎಸ್. ಆಮೂರ**
ಶ್ರೀಮಾತೆಯವರ ದೈವೀ ಶಕ್ತಿ 17
ಶ್ರೀಮಾತೆಯವರಿಗೆ ತೆರೆದಿರಿಸಿಕೊಳ್ಳಿರಿ 23
**ಅನು : ಶ್ರೀ ವೀರೇಂದ್ರ ಸಿಂಪಿ**
ಶ್ರೀಮಾತೆಯವರನ್ನು ಕುರಿತು ಚೈತ್ಯದ ಭಾವನೆ 33
ಶರಣಾಗತಿ 35
**ವಾರ್ತಾಪತ್ರ** 44




love

ನಾನು ಕೇವಲ ಶ್ರೀ ಅರವಿಂದರ ಶಕ್ತಿಯಾಗಿದ್ದೇನೆ[1] ಮತ್ತು (ಆಶ್ರಮದಲ್ಲಿರುವ) ಎಲ್ಲ ಮಕ್ಕಳ ಮಾತೆಯಾಗಿದ್ದೇನೆ. ನನ್ನ ಈ ಎಲ್ಲ ಮಕ್ಕಳು ಸಮನಾಗಿ ನನ್ನ ಪ್ರಜ್ಞೆಯ ಹಾಗೂ ಸತ್ತೆಯ ಭಾಗವಾಗಿದ್ದಾರೆ. ಪರಿವರ್ತನೆಗೆ ಒಳಗಾದ ನಂತರ, ಸಿದ್ಧಿಯನ್ನು ಪಡೆದುಕೊಂಡ ನಂತರ ನನ್ನ ಹಾಗೂ ಶ್ರೀ ಅರವಿಂದರ ಒಂದು ಮುಖವನ್ನು (aspect) ಪ್ರಕಟಿಸಲು ಅವರಲ್ಲಿ ಪ್ರತಿಯೊಬ್ಬನಿಗೆ ಹಕ್ಕಿರುತ್ತದೆ. ಸಾಮಾನ್ಯ ಪ್ರಕಟಣೆಯ ಐಕಮತ್ಯ(solidarity)ದಲ್ಲಿರುವ ಏಕತೆ ಹೊಸ ಹಾಗೂ ದೈವೀ ಜಗತ್ತನ್ನು ಪೃಥ್ವಿಯ ಮೇಲೆ ಸೃಷ್ಟಿಸಲು ಅನುವು ಮಾಡಿಕೊಡುತ್ತದೆ. ಪ್ರತಿಯೊಬ್ಬನೂ ತನ್ನ ಭಾಗವನ್ನು ತೆಗೆದುಕೊಂಡು ಬರುತ್ತಾನೆ, ಅದು ಇಡಿಯಾದ ಐಕಮತ್ಯದ ಸಾಮರ್ಥ್ಯದ ಒಂದು ಭಾಗ ಮಾತ್ರವಾಗಿರುತ್ತದೆ, ಸಂಪೂರ್ಣವಾಗಿರುವುದಿಲ್ಲ.

**CWSA, 32/84** **– ಶ್ರೀ ಅರವಿಂದರು**

---

**1 ಸಂಪಾದಕರ (All India Magazine)ದ ಟಿಪ್ಪಣಿ:**

ಶ್ರೀಮಾತೆಯವರು ಶ್ರೀ ಅರವಿಂದಾಶ್ರಮದ ಆಡಳಿತವನ್ನು 1927 ರ ಸುಮಾರು ಕೈಗೆತ್ತಿಕೊಂಡ ನಂತರ ಈ ಭಾಗವನ್ನು ಶ್ರೀಮಾತೆಯವರ ದೃಷ್ಟಿಕೋನದಿಂದ ಬರೆದಿದ್ದರು.

*

## ಶ್ರೀಮಾತೆಯವರು ಹಾಗೂ ಅತಿಮಾನಸ ಅವರೋಹಣ

### ಶ್ರೀಮಾತೆಯವರು ದೇಹಧಾರಣ ಮಾಡಿದ್ದು ಪೃಥ್ವಿಗೆ ಒಂದು ಸದವಕಾಶವಾಗಿದೆ

**ಪ್ರಶ್ನೆ :** *ಶ್ರೀಮಾತೆಯವರು ಮಾನವ ವ್ಯಕ್ತಿಯ ರೂಪದಲ್ಲಿ ಎಲ್ಲ ದೈವೀ ಸಾಮರ್ಥ್ಯಗಳನ್ನು ಧಾರಣ ಮಾಡುತ್ತಾರೆ ಮತ್ತು ದೈವೀ ಕೃಪೆಯನ್ನು ಭೌತಿಕ ಸ್ತರದ ಮೇಲೆ ಹೆಚ್ಚು ಹೆಚ್ಚಾಗಿ ಕೆಳಗಿಳಿಸಿ ತರುತ್ತಾರೆ ಮತ್ತು ಅವರು ದೇಹ ಧಾರಣ ಮಾಡಿದುದು ಇಡೀ ಭೌತಿಕ ಪ್ರಜ್ಞೆ ಬದಲಾಗಲು ಮತ್ತು ಪರಿವರ್ತನೆ ಹೊಂದಲು ಒಂದು ಸದವಕಾಶವಾಗಿರುತ್ತದೆ ಎಂದು ನಾನು ಯೋಚಿಸಿದರೆ ಅದು ಸರಿಯಾಗಿರುತ್ತದೆಯೆ?*

**ಶ್ರೀಮಾತೆ :** ಹೌದು. ಅವರು ದೇಹ ಧಾರಣ ಮಾಡಿದುದು ಪೃಥ್ವಿ ಅತಿಮಾನಸವನ್ನು ತನ್ನಲ್ಲಿ ಸ್ವೀಕರಿಸುವುದಕ್ಕೆ, ಮತ್ತು ಅದಕ್ಕಾಗಿ ಅವಶ್ಯವಾದ ಪರಿವರ್ತನೆಗೆ ತನ್ನನ್ನು ಒಳಪಡಿಸಿಕೊಳ್ಳಲು ಅದಕ್ಕೆ ಒಂದು ಸದವಕಾಶವಾಗಿರುತ್ತದೆ. ನಂತರ

ಅತಿಮಾನಸದಿಂದ ಇನ್ನೂ ಹೆಚ್ಚಿನ ಪರಿವರ್ತನೆಯಾಗುವುದು, ಆದರೆ ಇಡೀ ಪೃಥ್ವೀ ಪ್ರಜ್ಞೆ ಅತಿಮಾನಸೀಕರಣ ಪಡೆಯುವುದಿಲ್ಲ – ಅತಿಮನಸ್ಸನ್ನು ಪ್ರತಿನಿಧಿಸುವ ಹೊಸ ಕುಲವಿರುತ್ತದೆ, ಮನುಷ್ಯ ಮನಸ್ಸನ್ನು ಪ್ರತಿನಿಧಿಸಿದ ಹಾಗೆ ಅದು ಅತಿಮನಸ್ಸನ್ನು ಪ್ರತಿನಿಧಿಸುತ್ತದೆ.

*

**ಪ್ರಶ್ನೆ :** *ಶ್ರೀಮಾತೆಯವರು ತಮ್ಮದೇ ಮೇಲಿನ ಸ್ತರದಲ್ಲಿದ್ದುಕೊಂಡು ಸಾಧಕನ ಮೇಲೆ ನೇರವಾಗಿ ಕಾರ್ಯ ಕೈಕೊಳ್ಳುವುದಿಲ್ಲ, ಆದಾಗ್ಯೂ ಅವರು ಬಯಸಿದರೆ ಅಲ್ಲಿದ್ದುಕೊಂಡು ಹಾಗೆ ಮಾಡಬಲ್ಲರು. – ಅವರು ಒಂದೇ ದಿನದಲ್ಲಿ ಜಗತ್ತು ಅತಿಮಾನಸದ್ದಾಗುವಂತೆ ಕೂಡ ಮಾಡಬಲ್ಲರು. ಅಂತಹದೇನಾದರೂ ಆದರೆ ಇಲ್ಲಿ ಸೃಷ್ಟಿಸಲಾದ ಅತಿಮಾನಸ ಪ್ರಕೃತಿ ಮೇಲಿದ್ದುದರ ಹಾಗೆಯೇ ಆಗುತ್ತದೆ, ಅವಿದ್ಯೆಯಲ್ಲಿದ್ದ ಪೃಥ್ವಿ ಉತ್ಕ್ರಾಂತಿ ಹೊಂದುತ್ತ ಅತಿಮಾನಸೀಕರಣಗೊಂಡ ಪೃಥ್ವಿಯತ್ತ ಸಾಗಿ ಹೋದ ಹಾಗಿರುವುದಿಲ್ಲ ಮತ್ತು ಅದು ಅತಿಮನಸ್ಸಿನದ್ದೆಂದು ತೋರಿಬರುವುದಿಲ್ಲ.*

**ಶ್ರೀಮಾತೆ :** ಅದು ಅತಿ ಮಹತ್ವದ್ದಾದ ಸತ್ಯ.

*

**ಪ್ರಶ್ನೆ :** *ಶ್ರೀಮಾತೆಯವರ ದೈವೀ ಪ್ರಕಾಶಕ್ಕೆ ಹಾಗೂ ದೈವೀ ಶಕ್ತಿಗೆ ನಾವು ಹೆಚ್ಚು ಹೆಚ್ಚಾಗಿ ತೆರೆದಿರಿಸಿಕೊಂಡ ಹಾಗೆ ವಿಶ್ವದಲ್ಲಿ ಆ ಶಕ್ತಿ ಹೆಚ್ಚು ಹೆಚ್ಚಾಗಿ ಸ್ಥಾಪಿತಗೊಳ್ಳುತ್ತದಲ್ಲವೆ?*

**ಶ್ರೀ ಅ :** ಸ್ಥಾಪಿತಗೊಳ್ಳುತ್ತಿರುವುದು ಪರಿವರ್ತನೆಯ ಸಾಮರ್ಥ್ಯ – ವಿಶ್ವಂಭರ ದೈವೀ ಸಾಮರ್ಥ್ಯ ಯಾವಾಗಲೂ ಅಲ್ಲಿದೆ.

*

ಅತಿಮಾನಸವನ್ನು ಕೆಳಗಿಳಿಸಿ ತರಲು ಶ್ರೀಮಾತೆಯವರು ಬರುತ್ತಾರೆ ಮತ್ತು ಅದರ ಅವರೋಹಣ ಇಲ್ಲಿ ಅವರ ಪೂರ್ತಿ ಪ್ರಕಟಣೆ ಸಾಧ್ಯವಾಗುವಂತೆ ಮಾಡುತ್ತದೆ.

*

**ಕೊನೆಯ ಗುರಿ ಹಾಗೂ ದೈವೀ ಮಾರ್ಗ**

ಆ ಯೋಗದ ಕೊನೆಯ ಗುರಿ ಅತಿಮಾನಸ ದೈವೀ ಸತ್ಯವನ್ನು ಇಲ್ಲಿ ಕೆಳಗಿಳಿಸಿ ತರುವುದಾಗಿದೆ ಮತ್ತು ಅದರ ಕ್ರಿಯೆಯನ್ನು ಸಂಘಟಿಸುವುದಾಗಿದೆ ಎಂದು ಮಾತ್ರ ನಾನು ಹೇಳಬಲ್ಲೆ. (ಇತರ ಎಲ್ಲ ಗುರಿಗಳು ಮತ್ತು ಹಂತಗಳು ಪ್ರಾಥಮಿಕ ಸ್ವರೂಪದವು ಹಾಗೂ ಉಪಕರಣಗಳಾಗಿರುತ್ತವೆ.) ಆಶ್ರಮ ಮುಂದುವರಿದು ಹೋಗುವುದಕ್ಕಾಗಿ ಇರಿಸಿಕೊಂಡ ಆದಿಕಲ್ಪನೆ (assumption) ಹೀಗಿದೆ: ಈ ಯೋಗಾಚರಣೆಯನ್ನು ನನ್ನ ಹಾಗೂ ಶ್ರೀಮಾತೆಯವರ ಮೂಲಕ ಕೈಕೊಳ್ಳಬೇಕು ಮತ್ತು ಈ ಗುರಿಯನ್ನು ಮತ್ತು ಈ ದೈವೀ ಸತ್ಯದ ಅವರೋಹಣವನ್ನು, ನನ್ನ ಹಾಗೂ ಶ್ರೀಮಾತೆಯವರ ಮಾರ್ಗದರ್ಶನವನ್ನು ಸಾಧಕರು ಒಪ್ಪಿಕೊಳ್ಳಬೇಕು ಮತ್ತು ಅವರೋಹಣ ಮಾಡಿ ಬರುತ್ತಿರುವುದನ್ನು ನಮ್ಮಿಂದ ಸ್ವೀಕರಿಸಬೇಕು, ಹಾಗಿಲ್ಲದಿದ್ದರೆ ಅವರು ಅದನ್ನು ಸಿದ್ಧಿಸಿಕೊಳ್ಳಲಾರರು. ಅವರು ಇತರ ದೈವೀ ಸತ್ಯವನ್ನು ಅನುಸರಿಸುತ್ತಿದ್ದರೆ ಇಲ್ಲವೆ ಕಂಡುಕೊಳ್ಳಲು ಬಯಸಿದರೆ ಅದನ್ನು ಅವರು ಕೈಕೊಳ್ಳಲು ಮುಕ್ತರಾಗಿದ್ದಾರೆ, ಆದರೆ ಅದನ್ನು ಇಲ್ಲಿ ಕೈಕೊಳ್ಳಲಾಗುವುದಿಲ್ಲ, ಏಕೆಂದರೆ ಅದರಲ್ಲಿ ಅವರು ಯಶಸ್ವಿಯಾಗುವುದಿಲ್ಲ, ಮತ್ತು ಆ ಗುರಿಗಾಗಿ ದೈವೀ ಸತ್ಯ ಇಲ್ಲಿ ಕಾರ್ಯ ಮಾಡುತ್ತಿರುವುದಿಲ್ಲ. ನಮಗೆ ಕಂಡುಬಂದದ್ದೇನೆಂದರೆ ಅದಲ್ಲದ ಬೇರೆ ಏನೋ ಒಂದನ್ನು ಅನುಸರಿಸುವುದಕ್ಕಾಗಿ ನಮ್ಮಿಂದ ಬರುತ್ತಿರುವ ದೈವೀ ಸಾಮರ್ಥ್ಯವನ್ನು ತಿರಸ್ಕರಿಸಿದರೆ ಅದು ಅವರನ್ನು ಮಾರ್ಗದಿಂದ ಬೇರೆಡೆ ಕರೆದೊಯ್ಯುತ್ತದೆ ಮತ್ತು ಅವರು ನಮ್ಮ ಸಾನ್ನಿಧ್ಯದ ಇಲ್ಲವೆ ನಮ್ಮ ಯೋಗದ ಪ್ರಯೋಜನ ಪಡೆಯುವುದಿಲ್ಲ, ಇಲ್ಲಿ ಕೈಕೊಳ್ಳಬೇಕಾದ ಕಾರ್ಯದಲ್ಲಿ ಸಾಮರಸ್ಯವಿರುವ ಅಂಶವಾಗುವುದಿಲ್ಲ.

**CWSA, 32/34, 98, 33**

*

## ದೂರದಲ್ಲಿರುವುದು ಮಹತ್ವದ್ದಲ್ಲ

ನಂಬಿಕೆ, ಆಧ್ಯಾತ್ಮಿಕ ಜೀವನವನ್ನು ಅನುಸರಿಸುವುದರಲ್ಲಿ ಇಡಿಯಾದ ನಿಷ್ಕಾಪಟ್ಯ, ಮತ್ತು ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಪ್ರಭಾವಕ್ಕೆ ತಮ್ಮನ್ನು ತೆರೆದಿರಿಸಿಕೊಳ್ಳುವುದಕ್ಕೆ ಸಂಕಲ್ಪ ಹಾಗೂ ಕ್ಷಮತೆ ಇವುಗಳ ಹೊರತಾಗಿ ಆ ಪ್ರಭಾವವನ್ನು ಸ್ವೀಕರಿಸುವುದಕ್ಕೆ ಬೇರೆ ಇನ್ನಾವ ಷರತ್ತುಗಳು ಇರುವುದಿಲ್ಲ,

ಆದರೆ ಈ ಕ್ಷಮತೆ, ಸಾಮಾನ್ಯವಾಗಿ, ನಿಷ್ಕಾಪಟ್ಯ ಹಾಗೂ ನಂಬಿಕೆ ಇವುಗಳ ಪರಿಣಾಮದಿಂದ ಬರುತ್ತದೆ.

ಆಶ್ರಮದಿಂದ ದೂರ ಇದ್ದಾಗಲೂ ಈ ಯೋಗವನ್ನು ಅನುಸರಿಸುವುದು ಸಾಧ್ಯವಿದೆ. ಭಾರತದ ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಅದನ್ನು ಕೈಕೊಳ್ಳುತ್ತಿರುವ ಹಲವಾರು ಜನರಿದ್ದಾರೆ.

*

ಅಲ್ಲಿ ವೈಯಕ್ತಿಕ ಸ್ಪರ್ಶವಿದೆ, ಆದರೆ ಅದು ಅತಿ ಕಡಿಮೆ ಭೌತಿಕ ಸ್ಪರ್ಶದ ಆಧಾರದೊಂದಿಗೆ, ಆಂತರಿಕವಾಗಿ ಹತ್ತಿರ ಸಾಗುವುದು ಹೆಚ್ಚಿನ ರೀತಿಯಲ್ಲಿ ಆಗಬೇಕಾಗುತ್ತದೆ. ಆದರೆ ದೂರದಲ್ಲಿದ್ದಾಗಲೂ ಈ ಆಂತರಿಕ ಸ್ಪರ್ಶ ಮತ್ತು ಆಂತರಿಕ ಸಹಾಯ ಇವುಗಳನ್ನು ಒಳ್ಳೆಯ ರೀತಿಯಲ್ಲಿ ಸ್ವೀಕರಿಸಬಹುದು.

**CWSA, 32/106–07** **– ಶ್ರೀ ಅರವಿಂದರು**

*





ತಮ್ಮನ್ನು ಶ್ರೀಮಾತೆಯವರಿಗೆ ತೆರೆದಿರಿಸಿಕೊಂಡವರು, ತಮ್ಮ ಆಂತರಿಕ ಸತ್ತೆಯಲ್ಲಿ ಅವರಿಗೆ ಹತ್ತಿರವಾದವರು, ಅವರ ಸಂಕಲ್ಪದೊಂದಿಗೆ ಏಕವಾದವರು ಅವರ ಮಕ್ಕಳಾಗಿರುತ್ತಾರೆ – ದೈಹಿಕವಾಗಿ ಅವರಿಗೆ ಅತ್ಯಂತ ಹತ್ತಿರ ಬರುವವರಲ್ಲ.

**CWSA, 32/497** **– ಶ್ರೀ ಅರವಿಂದರು**

*

## ಮನುಕುಲದೊಂದಿಗೆ ದೈವೀ ವ್ಯವಹಾರ

### ದೈವೀ ಕರೆಗೆ ನಿಷ್ಠಾವಂತರಾಗಿರುವುದು

ಆತ್ಮದ ಪ್ರಕಾಶ ಹಾಗೂ ದೈವೀ ಕರೆ ಇವುಗಳಿಗೆ ನಿಷ್ಠಾವಂತರಾಗುವುದನ್ನು ಕುರಿತು ನಾನು ಮಾತನಾಡಿದಾಗ ಗತಕಾಲದ ಯಾವುದೇ ವಿಷಯವನ್ನು ಕುರಿತಾಗಲಿ ಇಲ್ಲವೆ ನಿನ್ನ ನಡೆನುಡಿಯಿಂದ ಆದ ತಪ್ಪನ್ನಾಗಲಿ ಕುರಿತು ಹೇಳಿರಲಿಲ್ಲ. ಎಲ್ಲ ಸತ್ವ–ಪರೀಕ್ಷೆಯ ಕಾಲವಿದ್ದಾಗ ಮತ್ತು ಆಕ್ರಮಣಗಳಿದ್ದಾಗ ಅತ್ಯವಶ್ಯವಾದದ್ದನ್ನು ಕುರಿತು ನಾನು ಸರಳ ಸೂಚನೆ ಕೊಡುತ್ತಿದ್ದೆ – ಅದು ಯಾವುದೇ ಬಗೆಯ ಇತರ ಸೂಚನೆಗಳು, ಪ್ರಚೋದನೆಗಳು ಹಾಗೂ ಪ್ರಲೋಭನ ಇಂತಹವುಗಳಿಗೆ ಕಿವಿಗೊಡದೆ ಇರುವುದು ಮತ್ತು ಅವುಗಳನ್ನೆಲ್ಲ ವಿರೋಧಿಸಲು ದೈವೀ ಸತ್ಯಕ್ಕೆ ಕರೆ ಕೊಡುವುದು, ದೈವೀ ಪ್ರಕಾಶಕ್ಕೆ ವಿಧಿ ರೂಪದಲ್ಲಿ ಮೂಕ ಸನ್ನೆ ಮಾಡುವುದು ಆಗಿರುತ್ತದೆ. ಎಲ್ಲ ಸಂಶಯ ಹಾಗೂ ಖಿನ್ನತೆಗಳಿಗೆ "ನಾನು ಭಗವಂತನಿಗೆ ಸೇರಿದವನಾಗಿದ್ದೇನೆ, ವಿಫಲನಾಗುವುದಿಲ್ಲ" ಎಂದು ಹೇಳಬೇಕು. ಅಪವಿತ್ರತೆ ಮತ್ತು ಅನರ್ಹತೆ ಕುರಿತು ಇರುವ ಎಲ್ಲ ಸೂಚನೆಗಳಿಗೆ "ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಆಯ್ದುಕೊಂಡ ಅಮರತ್ವದ ಮಗು ನಾನು, ನನಗೆ ಹಾಗೂ ಅವರಿಗೆ ನಾನು ಕೇವಲ ಸತ್ಯವಂತನಾಗಿರಬೇಕು – ವಿಜಯ ನಿಶ್ಚಿತ, ನಾನು ಪತನಗೊಂಡರೂ ಕೂಡ ಮತ್ತೆ ಮೇಲಕ್ಕೆದ್ದು ಬರುವುದು ನಿಶ್ಚಿತ" ಎಂದು ಉತ್ತರ ನೀಡಬೇಕು, ಇದರಿಂದ ಬೇರೆಡೆ ಸಾಗಿ ಇನ್ನಾವುದೋ ಆದರ್ಶಕ್ಕೆ ಸೇವೆ ಸಲ್ಲಿಸುವಂತೆ ಮಾಡುವ ಪ್ರಚೋದನೆಗೆ "ಇದು ಅತ್ಯಂತ ಶ್ರೇಷ್ಠವಾದದ್ದು, ಇದೇ ದೈವೀ ಸತ್ಯ, ಇದು ಮಾತ್ರ ನನ್ನೊಳಗಿರುವ ಆತ್ಮಕ್ಕೆ ತೃಪ್ತಿ ನೀಡಬಲ್ಲದು, ದೈವೀ ಪ್ರಯಾಣದಾದ್ಯಂತ ಕೊನೆಯವರೆಗೂ ನಾನು ಎಲ್ಲ ಪರೀಕ್ಷೆಗಳನ್ನು ಹಾಗೂ ಯಾತನೆಗಳನ್ನು

ಸಹಿಸಿಕೊಳ್ಳುವೆ” ಎಂದು ಉತ್ತರ ನೀಡಬೇಕು. ಇದನ್ನೇ ನಾನು ದೈವೀ ಪ್ರಕಾಶಕ್ಕೆ ಹಾಗೂ ದೈವೀ ಕರೆಗೆ ನಿಷ್ಠಾವಂತನಾಗಿರುವುದು ಎಂಬ ಅರ್ಥದಲ್ಲಿ ಹೇಳಿದ್ದೇನೆ.

**CWSA, 32/104** – **ಶ್ರೀ ಅರವಿಂದರು**

*

**ಸ್ನೇಹಿತೆ ಮತ್ತು ದೈವೀ ಮಾತೆ**

ನಿನ್ನೆಡೆಗಿನ ನಮ್ಮ ಮನೋಭಾವವನ್ನು ಯಾವುದಾದರೂ ಬದಲು ಮಾಡಬಹುದೆಂದು ನೀನು ಯೋಚಿಸುವ ಆವಶ್ಯಕತೆ ಇಲ್ಲ. ನಿನ್ನತ್ತ ಕಳಿಸಿಕೊಟ್ಟದ್ದು ಬಾಹ್ಯ ವಿಷಯಗಳಿಂದ ಬದಲಾವಣೆಗೆ ಒಳಗಾಗುವ ಪ್ರಾಣಿಕ ಮಾನವ ಪ್ರೇಮವಲ್ಲ; ಅದು ಉಳಿದುಕೊಳ್ಳುತ್ತದೆ ಮತ್ತು ನಾವು ಪಟ್ಟುಹಿಡಿದು ನಿನಗೆ ಸಹಾಯ ಮಾಡಲು ಮತ್ತು ನಿನ್ನನ್ನು ಮೇಲಕ್ಕೆತ್ತಿ ಹಿಡಿಯಲು ಪ್ರಯತ್ನಿಸುತ್ತೇವೆ ಮತ್ತು ದೈವೀ ಪ್ರಕಾಶದತ್ತ ಕರೆದೊಯ್ಯುತ್ತೇವೆ, ಅಲ್ಲಿ ಆತ್ಮ ಹಾಗೂ ಹೃದಯಗಳ ಏಕತೆಯಲ್ಲಿ ನೀನು ದೈವೀ ಸ್ನೇಹಿತೆ ಮತ್ತು ದೈವೀ ಮಾತೆಯನ್ನು ಗುರುತಿಸುವಿ.

**CWSA, 32/101** – **ಶ್ರೀ ಅರವಿಂದರು**

*

**ಮನುಷ್ಯ ಅದೆಷ್ಟೋ ಸಲ ತಪ್ಪು ಮಾಡಬಹುದು**

ಅದು ದೋಷ ಇಲ್ಲವೆ ಶಿಕ್ಷೆ ನೀಡುವಿಕೆ ಇವುಗಳ ಪ್ರಶ್ನೆಯಲ್ಲ. ನಾವು ಜನರನ್ನು ದೋಷಗಳಿಗಾಗಿ ನಿಂದಿಸಬೇಕಾದರೆ, ಶಿಕ್ಷೆ ನೀಡಬೇಕಾದರೆ ಮತ್ತು ಸಾಧಕರನ್ನು ನ್ಯಾಯಮಂಡಲಿಯ ಮುಂದೆ ನಿಲ್ಲಿಸಬೇಕಾದರೆ ಯಾವ ಸಾಧನೆಯನ್ನೂ ಕೈಕೊಳ್ಳಲಾಗುವುದಿಲ್ಲ. ನಮ್ಮ ವಿರುದ್ಧ ನಿನ್ನ ನಿಂದನೆ ಹೇಗೆ ಸಮರ್ಥನೀಯವಾಗಿದೆ ಎಂಬುದು ನನಗೆ ಕಂಡುಬರುತ್ತಿಲ್ಲ. ಸಾಧಕರಿಗಾಗಿರುವ ನಮ್ಮ ಏಕೈಕ ಕರ್ತವ್ಯವೆಂದರೆ ಅವರನ್ನು ಅವರ ಆಧ್ಯಾತ್ಮಿಕ ಸಿದ್ಧಿಯತ್ತ ಕರೆದೊಯ್ಯುವುದಾಗಿದೆ – ಸಂಸಾರದ ಜಗಳಗಳಲ್ಲಿ ಒಬ್ಬನಿಗೆ ಆಧಾರ ನೀಡುವ, ಇನ್ನೊಬ್ಬನ ಮೇಲೆ ಭಾರ ಹೊರಿಸುವ ರೀತಿಯಲ್ಲಿ ಕಾರ್ಯಮಾಡುವ ಕುಟುಂಬದ ಯಜಮಾನನ ಹಾಗೆ ನಾವು ನಡೆದುಕೊಳ್ಳಲಾರೆವು. ‘ಕ್ಷ’ನು ಎಷ್ಟೇ ತಪ್ಪು ಮಾಡಲಿ, ಅವನನ್ನು ನಾವು ಕೈಹಿಡಿದು ಕರೆದೊಯ್ಯಬೇಕು, ಭಗವಂತನತ್ತ ಮತ್ತೊಮ್ಮೆ ಚಲಿಸುವಂತೆ ಮೇಲಕ್ಕೆತ್ತಿ ಹಿಡಿಯಬೇಕು.

**CWSA, 32/115** – **ಶ್ರೀ ಅರವಿಂದರು**

*

## ಮನುಕುಲದೊಂದಿಗಿರುವ ದೈವೀ ನಿಯಮ

ಶ್ರೀಮಾತೆಯವರು ಮತ್ತು ನಾನು ಎಲ್ಲರೊಡನೆ ಭಗವಂತನ ನಿಯಮದ ಪ್ರಕಾರ ವ್ಯವಹರಿಸುತ್ತೇವೆ. ಶ್ರೀಮಂತರನ್ನು ಮತ್ತು ಬಡವರನ್ನು, ಉಚ್ಚ ಕುಲದಲ್ಲಿ ಜನಿಸಿದವರನ್ನು ಮತ್ತು ನೀಚ ಕುಲದಲ್ಲಿ ಜನಿಸಿದವರನ್ನು ಅವರ ಮಾನವ ಮಟ್ಟಕ್ಕನುಗುಣವಾಗಿ ಸ್ವೀಕರಿಸುತ್ತೇವೆ, ಮತ್ತು ಅವರಿಗೆ ಸಮಾನ ರೀತಿಯಲ್ಲಿ ಪ್ರೇಮವನ್ನು ಮತ್ತು ರಕ್ಷಣೆಯನ್ನು ನೀಡುತ್ತೇವೆ. ಸಾಧನೆಯಲ್ಲಿ ಅವರ ಪ್ರಗತಿ ನಮಗೆ ಸಂಬಂಧಿಸಿದ ವಿಷಯವಾಗಿರುತ್ತದೆ. – ಏಕೆಂದರೆ ಅದಕ್ಕಾಗಿ ಅವರು ಇಲ್ಲಿಗೆ ಬಂದಿದ್ದಾರೆ, ನಾಲಿಗೆ ರುಚಿ ಕಂಡುಕೊಳ್ಳುವುದಕ್ಕಾಗಲಿ, ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಲಿ ಅಲ್ಲ, ಸಾಧಾರಣ ರೀತಿಯ ಪ್ರಾಣಿಕ ಒತ್ತಾಯದ ಬೇಡಿಕೆಗಳಿಗಾಗಿ ಅಲ್ಲ ಇಲ್ಲವೆ ಸ್ಥಾನಮಾನಕ್ಕಾಗಿ ಇಲ್ಲವೆ ಸುಖಸೌಲಭ್ಯಗಳಿಗಾಗಿ ಜಗಳ ಮಾಡುವುದಕ್ಕಲ್ಲ. ಶ್ರೀಮಾತೆಯವರ ಪ್ರೇಮ ಹಾಗೂ ರಕ್ಷಣೆಗಳಿಗೆ ಅವರು ಯಾವ ರೀತಿಯಲ್ಲಿ ಉತ್ತರ ನೀಡುತ್ತಾರೆ ಎಂಬುದರ ಮೇಲೆ ಆ ಪ್ರಗತಿ ಅವಲಂಬಿಸಿರುತ್ತದೆ – ಎಲ್ಲರ ಮೇಲೆ ಸಮನಾಗಿ ಧಾರೆಯೆರೆಯುವ ಶಕ್ತಿಗಳನ್ನು ಅವರು ಸ್ವೀಕರಿಸುವುದರ ಮೇಲೆ, ಅವರಿಗೆ ಕೊಡಲಾದುದನ್ನು ಸರಿಯಾಗಿ ಉಪಯೋಗಿಸುವುದರ ಮೇಲೆ ಇಲ್ಲವೆ ದುರುಪಯೋಗ ಪಡಿಸುವುದರ ಮೇಲೆ ಆ ಪ್ರಗತಿ ಅವಲಂಬಿಸಿರುತ್ತದೆ. ಎಲ್ಲರೊಡನೆ ಬಾಹ್ಯದಲ್ಲಿ ಒಂದೇ ರೀತಿಯಲ್ಲಿ ವ್ಯವಹರಿಸಬೇಕು ಎಂಬ ಉದ್ದೇಶವಾಗಲಿ ಇಲ್ಲವೆ ನಿರ್ಬಂಧವಾಗಲಿ ಶ್ರೀಮಾತೆಯವರಲ್ಲಿ ಇರುವುದಿಲ್ಲ – ಅವರು ಹಾಗೆ ಮಾಡಬೇಕೆಂಬ ಒತ್ತಾಯದ ಬೇಡಿಕೆ ಅಸಂಬದ್ಧ ಹಾಗೂ ದಡ್ಡತನದ್ದು ಆಗಿರುತ್ತದೆ. ಮತ್ತು ಅವರು ಅದನ್ನು ಹಾಗೆ ಕೈಕೊಂಡರೆ ವಿಷಯಗಳ ಸತ್ಯವನ್ನು ಹಾಗೂ ದೈವೀ ನಿಯಮವನ್ನು ಮಿಥ್ಯೆಯದನ್ನಾಗಿ ಮಾಡಿದಂತಾಗುತ್ತದೆ. ಪ್ರತಿಯೊಬ್ಬ ಸಾಧಕನೊಡನೆ ಅವನ ಸ್ವಭಾವ, ಕ್ಷಮತೆಗಳು, ನಿಜವಾದ ಆವಶ್ಯಕತೆಗಳು (ಅವನ ಹಕ್ಕುಗಳನ್ನು ಇಲ್ಲವೆ ಆಸೆಗಳನ್ನು ಕುರಿತಾಗಿ ಅಲ್ಲ), ಮತ್ತು ಅವನ ಆಧ್ಯಾತ್ಮಿಕ ಯೋಗಕ್ಷೇಮಕ್ಕೆ ಯಾವುದು ಅತ್ಯಂತ ಒಳ್ಳೆಯದು ಇವೆಲ್ಲವುಗಳೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದನ್ನು ಹೇಗೆ ಕೈಕೊಳ್ಳಬೇಕು ಎಂಬುದನ್ನು ಕುರಿತು ಸಾಧಕರಲ್ಲಿ ಕೆಲವರು ಅಜ್ಞಾನದಿಂದ ನೀಡಿದ ಆದೇಶವನ್ನು ನಾವು ತಿರಸ್ಕರಿಸುತ್ತೇವೆ, ಅವರು ತಮ್ಮ ಮಟ್ಟದ ಪ್ರಕಾರ ಇಲ್ಲವೆ ಸಮತೆ, ನ್ಯಾಯಬದ್ಧತೆ, ಅವರ ಪ್ರಾಣಿಕದ ಒತ್ತಾಯದ ಬೇಡಿಕೆಗಳು ಇಲ್ಲವೆ ಬಾಹ್ಯ ಜಗತ್ತಿನಿಂದ ತಮ್ಮೊಡನೆ ತಂದ ವಿಚಾರಗಳು ಇವುಗಳ

ಪ್ರಕಾರ ಶ್ರೀಮಾತೆಯವರು ಕಾರ್ಯ ಕೈಕೊಳ್ಳಬೇಕೆಂದು ಪರಿಗಣಿಸುತ್ತಾರೆ. ನಮ್ಮೊಳಗಿರುವ ದೈವೀ ಪ್ರಕಾಶದ ಪ್ರಕಾರ, ಮತ್ತು ಈ ಪೃಥ್ವಿಯ ಸ್ವಭಾವದ ಮೇಲೆ ದೈವೀ ಸತ್ಯವನ್ನು ಸ್ಥಾಪಿಸಲು ಹೆಣಗುವುದಕ್ಕಾಗಿ ನಾವು ಕಾರ್ಯ ಕೈಕೊಳ್ಳುತ್ತೇವೆ.

**CWSA, 32/116** **– ಶ್ರೀ ಅರವಿಂದರು**

*

ಪ್ರತಿಯೊಬ್ಬನೂ ತನ್ನ ತಪ್ಪಾದ ಪ್ರತಿಕ್ರಿಯೆಗಳನ್ನು ತೊಡೆದು ಹಾಕಬೇಕು. – ಸಾಧಕರು ಅದಕ್ಕಾಗಿ ಇಲ್ಲಿದ್ದಾರೆ. ಬೇರೆ ಇನ್ನಾವ ಉಪಾಯವಿದೆ? ಅವರು ಅದನ್ನು ಕೈಕೊಳ್ಳಲು ತಯಾರಾಗದಿದ್ದರೆ ನಾವು ಸಾಧಾರಣ ಜೀವನ ನಡೆಸುವ ನೆಲದ ಮೇಲೆ ಉಳಿದುಕೊಳ್ಳುತ್ತೇವೆ; ಅಲ್ಲಿ ದೊಡ್ಡ ಕುಟುಂಬವೊಂದರಲ್ಲಿ ಕೈಕೊಳ್ಳುವ ರೀತಿಯ ಕಾರ್ಯ ಮಾಡಬೇಕು: ಜಗಳಗಳಲ್ಲಿ, ರಾಜೀ ಮಾಡುವುದರಲ್ಲಿ, ಸಾಂತ್ವನಗೊಳಿಸುವುದರಲ್ಲಿ, ಗದರಿಸುವುದರಲ್ಲಿ, ಶಿಕ್ಷೆ ನೀಡುವುದರಲ್ಲಿ, ಭಾಷಣ ಕೊಡುವುದರಲ್ಲಿ, ಮಧ್ಯೆ ಪ್ರವೇಶಿಸಬೇಕು, ಮುಂದಿನ ಸಂಘರ್ಷ ಬರುವವರೆಗೆ ವಿಷಯಗಳನ್ನು ಸಾವರಿಸಿಕೊಂಡು ಹೋಗಬೇಕು. ಅದಕ್ಕೆ ಕೊನೆ ಎಂಬುದಿಲ್ಲ ಮತ್ತು ಅದನ್ನು ನಾವು ಬಹಳ ದಿನಗಳ ಹಿಂದೆಯೇ ಬಿಟ್ಟುಕೊಟ್ಟಿದ್ದೇವೆ. ಪ್ರತಿಯೊಬ್ಬನೂ ತನ್ನನ್ನು ಸರಿಪಡಿಸಿಕೊಳ್ಳಬೇಕು – ಅದರಿಂದ ಹೊರಗೆ ಬರುವುದಕ್ಕೆ ಬೇರೆ ಮಾರ್ಗವಿಲ್ಲ.

**CWSA, 32/117** **– ಶ್ರೀ ಅರವಿಂದರು**

*

**ಮಾನವ ಪ್ರಜ್ಞೆ ಹಲವಾರು ಭಾಗಗಳಿಂದ ತಯಾರಾಗಿರುತ್ತದೆ**

ಮಾನವ ಪ್ರಜ್ಞೆ ಅನೇಕ ಮೂಲವಿಷಯಗಳಿಂದ ತಯಾರಾಗಿದೆ, ಮತ್ತು ಅವೆಲ್ಲವೂ ಆಧ್ಯಾತ್ಮಿಕ ಪ್ರಯತ್ನವನ್ನು ಕೂಡಲೆ ತಾಳಿಕೊಳ್ಳಲಾರವು – ಅವುಗಳಿಗೆ ತರಬೇತು ಕೊಡಬೇಕಾಗುತ್ತದೆ, ಅವುಗಳಲ್ಲಿ ಜ್ಞಾನೋದಯವನ್ನು ಉಂಟು ಮಾಡಬೇಕಾಗುತ್ತದೆ, ಅವುಗಳ ರೂಢಿಯನ್ನು ಬದಲು ಮಾಡಬೇಕಾಗುತ್ತದೆ. ಆ ಕಾರಣದಿಂದಾಗಿಯೇ ಶ್ರೀಮಾತೆಯವರು ಮತ್ತು ನಾನು ಆತ್ಮವು ಇತರ ವಿಷಯಗಳ ಮೇಲೆ ಬೆಳೆಯಲು ಅದಕ್ಕೆ ಕಾಲಾವಕಾಶ ಮಾಡಿಕೊಡುತ್ತೇವೆ, ಅದಕ್ಕೆ ಹೆಚ್ಚಿನ ಕಾಲ ಬೇಕಾದರೆ ನಾವು ಅದಕ್ಕೆ ಮಹತ್ವ ನೀಡುವುದಿಲ್ಲ, ಆದರೆ ಅಲ್ಲಿ

ಕೇಂದ್ರದಲ್ಲಿರಬೇಕಾದ ನಿಷ್ಕಾಪಟ್ಯ ಹಾಗೂ ಸಂಕಲ್ಪಗಳಿರಬೇಕು. – ಅವು ಹಾಗೆ ನಿನ್ನಲ್ಲಿ ನಿಶ್ಚಿತವಾಗಿ ಇವೆ. ವಿಷಯಗಳು ತೀವ್ರಗತಿಯಿಂದ ಸಾಗುತ್ತಿಲ್ಲವೆಂದು ತಾಳ್ಮೆ ಕಳೆದುಕೊಳ್ಳುವುದು ಬೇಡ, ಇಲ್ಲವೆ ಸುಲಭವಾಗಿ ಧೈರ್ಯಗುಂದುವುದು ಬೇಡ. ಅಭೀಪ್ಸೆಪಡು, ಗಾಢ ನಂಬಿಕೆಯ ರವಿ ಪ್ರಕಾಶದಲ್ಲಿ ನಿನ್ನನ್ನು ಕಾಪಾಡಿಕೊಂಡು ಬಾ, ಮತ್ತು ಬೀಜ ಬೆಳೆಯಲು ಅನುವು ಮಾಡಿಕೊಡು.

**CWSA, 32/117** **– ಶ್ರೀ ಅರವಿಂದರು**

*

ನಮ್ಮ ಸಾನ್ನಿಧ್ಯ, ಶಕ್ತಿ, ಶಾಂತಿ, ಪ್ರೇಮ ಇವೆಲ್ಲ ಯಾವಾಗಲೂ ನಿನ್ನ ಜೊತೆಗಿವೆ, ಅದರ ಬಗ್ಗೆ ನೀನು ಅರಿವುಳ್ಳವನಾಗಬೇಕು ಮತ್ತು ಆ ಅರಿವನ್ನು ಕಾಪಾಡಿಕೊಂಡು ಬರಬೇಕು. ನೀನು ಅದನ್ನು ಕೈಕೊಂಡರೆ ಉಳಿದದ್ದೆಲ್ಲ (ನಿನ್ನ ತೊಂದರೆಗಳು, ಹಳೆಯ ರೂಢಿಗಳು ಇತ್ಯಾದಿ) ಕಡಿಮೆ ಮಹತ್ವ ಹೊಂದಿರುತ್ತವೆ. ಮತ್ತು ಕಾಲಕ್ರಮೇಣ ಅವುಗಳನ್ನು ಸರಿಪಡಿಸಲಾಗುವುದು.

**CWSA, 32/105** **– ಶ್ರೀ ಅರವಿಂದರು**

*

## ಅವಶ್ಯವಾದ ಪ್ರಯತ್ನ

### ದೈವೀ ಸಹಾಯವನ್ನು ಸ್ವೀಕರಿಸುವುದಕ್ಕೆ ಸಂಶಯಗಳನ್ನು ತೆಗೆದುಹಾಕಿರಿ

ಸಹಾಯದ ಸಾಧ್ಯತೆ ಕುರಿತು ಸಂಶಯ ತರ್ಕಬದ್ಧವಾಗಿರುವುದು ಅಸಂಭವ, ಏಕೆಂದರೆ ಜೀವನದ ಮತ್ತು ಗತಕಾಲದಲ್ಲಾದ ಆಧ್ಯಾತ್ಮಿಕ ಅನುಭವದ ಎಲ್ಲ ಸಾಕ್ಷ್ಯ, ಶ್ರೀಮಾತೆಯವರಿಂದ ಹಾಗೂ ನನ್ನಿಂದ ಸಹಾಯ ಪಡೆದ ಸಾಕಷ್ಟು ಸಂಖ್ಯೆಯಲ್ಲಿರುವ ಜನರ ವಿಶೇಷ ಅನುಭವದ ಸಾಕ್ಷ್ಯ ಇದೆಲ್ಲ ಒಬ್ಬರಿಂದ ಇನ್ನೊಬ್ಬರಿಗೆ, ಗುರುವಿನಿಂದ ಶಿಷ್ಯರಿಗೆ ಇಲ್ಲವೆ ನನ್ನಿಂದ ನನ್ನ ಶಿಷ್ಯರಿಗೆ ಆಂತರಿಕ ಇಲ್ಲವೆ ಆಧ್ಯಾತ್ಮಿಕ ಸಹಾಯ ಸಾಧ್ಯವಿಲ್ಲವೆಂಬ ವಿಚಾರಕ್ಕೆ ವಿರುದ್ಧವಾಗಿದೆ. ಹಾಗಾಗಿ ತರ್ಕದಿಂದ ಮೇಲೆದ್ದು ಬರುವ ಸಂಶಯ ಅದಲ್ಲ, ಆದರೆ ಪ್ರಾಣಿಕದಿಂದ ಮತ್ತು ಭೌತಿಕ ಮನಸ್ಸಿನಿಂದ ಬಂದ ಸಂಶಯ ಅದಾಗಿದೆ, ಅದು ನಿನ್ನನ್ನು ತೊಂದರೆಗೀಡುಮಾಡಿದೆ. ಭೌತಿಕ ಮನಸ್ಸು ತಾನೇ ಸ್ವತಃ ಅನುಭವಕ್ಕೆ ತಂದುಕೊಂಡಿರದೆ ಇದ್ದುದೆಲ್ಲವನ್ನು ಕುರಿತು ಸಂಶಯ ಪಡುತ್ತದೆ ಮತ್ತು ತಾನೇ

ಅನುಭವಕ್ಕೆ ತಂದುಕೊಂಡದ್ದು ಅಲ್ಲಿ ಉಳಿದುಕೊಂಡಿರದೆ ಇದ್ದರೆ ಇಲ್ಲವೆ ಅದನ್ನು ದೊರಕಿಸಲು ಕೂಡಲೆ ಸುಲಭವಾಗದೆ ಹೋದರೆ ಆಗಲೂ ಕೂಡ ಸಂಶಯಪಡುತ್ತದೆ. – ಪ್ರಾಣಿಕ ಎದೆಗುಂದುವಿಕೆ ಹಾಗೂ ನಿರಾಶೆಗಳಿರುವ ಸೂಚನೆಗಳನ್ನು ಒಳಗೆ ತರುತ್ತದೆ, ಅವು ಸಂಶಯವನ್ನು ಬಲಪಡಿಸುತ್ತವೆ ಮತ್ತು ಸ್ಪಷ್ಟ ದರ್ಶನಕ್ಕೆ ತಡೆ ಉಂಟುಮಾಡುತ್ತವೆ. ಹಾಗಾಗಿ ಅದೊಂದು ತೊಂದರೆಯಾಗಿದ್ದು ಅದರ ವಿರುದ್ಧ ಕೇವಲ ತಾರ್ಕಿಕ ಚಿಂತನದಿಂದ ಪರಿಣಾಮಕಾರಿಯಾದ ಹೋರಾಟ ನಡೆಸಲಿಕ್ಕಾಗುವುದಿಲ್ಲ, ಆದರೆ ಅದು ಸ್ವಯಂ ನಿರ್ಮಿತ ತೊಂದರೆ – ಸ್ವತಃ ರೂಪಿಸಿದ ಸಂಸ್ಕಾರ ಇಲ್ಲವೆ ಮಾನಸಿಕ ರಚನೆ ಎಂಬುದನ್ನು ಸ್ಪಷ್ಟವಾಗಿ ಗ್ರಹಿಸುವುದರ ಮೂಲಕ ಅದರ ಮೇಲೆ ಜಯ ಸಾಧಿಸಬಹುದು, ಅದು ರೂಢಿಗತವಾಗಿರುತ್ತದೆ, ಅದನ್ನು ಮುರಿದುಹಾಕಬೇಕು. ಅದರಿಂದಾಗಿ ನೀವು ಮುಕ್ತ ಮನಸ್ಸನ್ನು ಹಾಗೂ ಪ್ರಾಣಿಕವನ್ನು ಹೊಂದುತ್ತೀರಿ, ಅದು ಅನುಭವಕ್ಕೆ ಮುಕ್ತವಾಗಿರುತ್ತದೆ.

**CWSA, 32/122** **– ಶ್ರೀ ಅರವಿಂದರು**

*


**ಸತತ ಹೊಂದಿರಬೇಕಾದ ಅಭೀಪ್ಸೆ**

ಶ್ರೀಮಾತೆಯವರ ಪ್ರಕಾಶ ಹಾಗೂ ಶಕ್ತಿಗಳನ್ನು ಕುರಿತು ಸತತ ಅಭೀಪ್ಸೆ ಹೊಂದಿರುವುದರ ಮೂಲಕ ಮಾತ್ರ ನೀನು ನಿಜವಾದ ಹಾಗೂ ಏಕಪ್ರಕಾರದ ಪ್ರಗತಿಯನ್ನು ಸಾಧಿಸಬಲ್ಲೆ. ಶ್ರೀಮಾತೆಯವರ ಪ್ರಕಾಶ ಮತ್ತು ಶಕ್ತಿ ಇವು ಪುನರಾವರ್ತನೆಗೊಳ್ಳುವುದರಿಂದ ಮತ್ತು ಪಟ್ಟುಹಿಡಿಯುವುದರಿಂದ ಮಾತ್ರ ಕ್ಷೋಭೆಗೊಳಗಾಗುವ ರೂಢಿ ಮತ್ತು ಸಂಘಟನೆಯ ಕೊರತೆ ಕಡಿಮೆಯಾಗಬಲ್ಲವು ಮತ್ತು ಕೊನೆಗೆ ಮಾಯವಾಗಬಲ್ಲವು. ಈ ರೀತಿಯಲ್ಲಿ ಮಾತ್ರ ಕೆಳಸ್ತರದ ಸತ್ತೆಯನ್ನು ತಯಾರು ಮಾಡಬಹುದು ಮತ್ತು ದೈವೀ ಸತ್ಯ ಹಾಗೂ ದೈವೀ ಪ್ರಕಾಶ ಇವುಗಳ ಅವರೋಹಣ ಕೊನೆಗೆ ಸಾಧ್ಯವಾಗುವಂತೆ ಮಾಡಬಹುದು.

**CWSA, 32/135** **– ಶ್ರೀ ಅರವಿಂದರು**

*




blessings

ಶ್ರೀಮಾತೆಯವರ ದೈವೀ ಶಾಂತಿ ನಿನ್ನ ಮೇಲ್ಗಡೆಗಿದೆ – ಅಭೀಪ್ಸೆ ಮತ್ತು ಸ್ಥಿರವಾಗಿ ನಿನ್ನನ್ನು ತೆರೆದಿರಿಸಿಕೊಳ್ಳುವಿಕೆ ಇವುಗಳ ಮೂಲಕ ಅದು ಅವರೋಹಣ ಮಾಡುತ್ತದೆ. ಅದು ಪ್ರಾಣಿಕ ಹಾಗೂ ದೇಹ ಇವುಗಳ ಮೇಲೆ ಹಿಡಿತ ಸಾಧಿಸಿದಾಗ ಸಮತೆ ಸುಲಭವಾಗುತ್ತದೆ ಮತ್ತು ಕೊನೆಗೆ ಸ್ವಯಂಚಾಲಿತವಾಗುತ್ತದೆ.

*

ಈ ಸಾಧನೆಯನ್ನು ಉಪದೇಶದ ಮೂಲಕ ಕೊಡಲಾಗುವುದಿಲ್ಲ ಇಲ್ಲವೆ ಮುಂದುವರಿಸಿಕೊಂಡು ಹೋಗಲಾಗುವುದಿಲ್ಲ.

ಶ್ರೀಮಾತೆಯವರ ಕ್ರಿಯೆಯನ್ನು ಹಾಗೂ ಅಂತರಂಗದಲ್ಲಿ ಅವರ ಕಾರ್ಯಗತಿಯನ್ನು ಸ್ವೀಕರಿಸಲು ತಮ್ಮನ್ನು ತೆರೆದಿರಿಸಿಕೊಳ್ಳಲು ಅಭೀಪ್ಸೆಯ ಮೂಲಕ, ಶ್ರೀಮಾತೆಯವರನ್ನು ಕುರಿತು ಧ್ಯಾನ ಕೈಕೊಳ್ಳುವುದರ ಮೂಲಕ ಕ್ಷಮತೆಯನ್ನು ಹೊಂದಿದವರು ಈ ಯೋಗದಲ್ಲಿ ಯಶಸ್ವಿಯಾಗಬಲ್ಲರು.

**CWSA, 32/135–136** **– ಶ್ರೀ ಅರವಿಂದರು**

*

**ಸಾಧನೆ ಕುರಿತು ಮೂರು ಬಗೆಯ ಪ್ರಯತ್ನ**

ಅಭೀಪ್ಸೆ, ನಿರಾಕರಣ, ಶ್ರೀಮಾತೆಯವರನ್ನು ಸ್ಮರಿಸಿಕೊಳ್ಳುತ್ತಿರುವುದು ಹಾಗೂ ಅವರಿಗೆ ಸಮರ್ಪಣ ಮಾಡಿಕೊಳ್ಳುವುದು ಮತ್ತು ಅವರ ಪ್ರಜ್ಞೆಯೊಂದಿಗೆ ಏಕತೆ ಪಡೆಯುವುದು ಇವು ಸಾಧನೆಯ ಮುಖ್ಯ ಸಾಧನ(means)ಗಳು ಎಂಬುದು ಹೆಚ್ಚು ಸತ್ಯವಾದದ್ದು. ಮನುಷ್ಯ ಅತಿಮಾನಸವನ್ನು ತನಗಾಗಿ, ತನ್ನದೇ ಸಾಧನದ ಮೂಲಕ ಅರಸುವುದು ಮೂರ್ಖತನದ್ದು ಎಂಬುದೂ ಕೂಡ ಸತ್ಯವಾದದ್ದು; ಅದನ್ನು ನಾನು ಪ್ರಾರಂಭದಿಂದಲೇ ಹೇಳಿದ್ದೇನೆ, ಇತ್ತೀಚೆಗೆ ಅದರ ಮೇಲೆ ಹೆಚ್ಚಿನ ಒತ್ತುಕೊಟ್ಟು ಹೇಳಿದ್ದೇನೆ. ಭಗವಂತನೊಡನೆ ಏಕತೆ ಪಡೆಯುವುದನ್ನು ಪ್ರಧಾನ ಗುರಿಯನ್ನಾಗಿ ಮಾಡುವುದು, ಉಳಿದದ್ದನ್ನೆಲ್ಲ ಅದರ ಗೌಣ ಭಾಗವನ್ನಾಗಿ, ಪರಿಣಾಮ ಸ್ವರೂಪದ್ದನ್ನಾಗಿ ಮಾಡುವುದು, ಪ್ರಗತಿ, ಅನುಭವಗಳು ಇತ್ಯಾದಿಗಳನ್ನು ಅವುಗಳ ಸಲುವಾಗಿಯೇ ಇಲ್ಲವೆ ಅಹಂಕಾರದ ಸಲುವಾಗಿ ಅರಸದೆ ಇರುವುದು ಸಾಧಕ ಹೊಂದಬಹುದಾದ ಸರಿಯಾದ ಮನೋಭಾವ ಎಂಬುದು ಕೂಡ ಸತ್ಯವಾದದ್ದು. ಕೊನೆಯದಾಗಿ ಹೇಳುವುದಾದರೆ

ಸಾಧಕ ಸ್ವ–ಹಿತಾಸಕ್ತ, ಅಹಂಕಾರಿ ಮತ್ತು ಮಬ್ಬಾದವನಾಗಿದ್ದರೆ, ಅವನು ಧ್ಯಾನ, ದರ್ಶನ ಹಾಗೂ ಯೋಗದಲ್ಲಿರುವ ಉಳಿದೆಲ್ಲವನ್ನು ದುರುಪಯೋಗ ಮಾಡಿಕೊಳ್ಳಬಲ್ಲನು ಎಂಬುದು ಸತ್ಯವಾದದ್ದು. ಆದರೆ ಅದರರ್ಥ ಸಾಧನೆಯಲ್ಲಿ ಧ್ಯಾನ, ದರ್ಶನ ಇತ್ಯಾದಿಗಳು ಯೋಗದಲ್ಲಿ ನಿರುಪಯುಕ್ತ, ಅವುಗಳನ್ನು ದೂರವಿರಿಸಬೇಕು ಎಂದಿರುವುದಿಲ್ಲ.

**CWSA, 32/137–38** **– ಶ್ರೀ ಅರವಿಂದರು**

*

ಯೋಗಾಚರಣೆಗಾಗಿ ಮನುಷ್ಯ ತನ್ನದೇ ಪ್ರಯತ್ನ ಕೈಕೊಳ್ಳುವುದರ ಆವಶ್ಯಕತೆ ಇರುತ್ತದೆ ಎಂಬುದು ನಿಶ್ಚಿತ, ಆದಾಗ್ಯೂ ಸಾಧನೆಯನ್ನು ಕೇವಲ ತನ್ನದೇ ಪ್ರಯತ್ನದಿಂದ ಅವನು ಕೈಕೊಳ್ಳಲಾರ. ಶ್ರೀಮಾತೆಯವರ ದೈವೀ ಶಕ್ತಿಯ ಆವಶ್ಯಕತೆ ಇದೆ, ಆದರೆ ಸಾಧಕ ಅದಕ್ಕೆ ತನ್ನನ್ನು ತೆರೆದಿರಿಸಿಟ್ಟುಕೊಳ್ಳಬೇಕು, ಆ ದೈವೀ ಶಕ್ತಿಗೆ ವಿರೋಧವಾದದ್ದನ್ನು ನಿರಾಕರಿಸಬೇಕು, ಸಾಧನೆಯಲ್ಲಿ ತನ್ನ ಪೂರ್ತಿ ನಿಷ್ಕಾಪಟ್ಯ, ಅಭೀಪ್ಸೆ, ಸಂಕಲ್ಪ ಇವುಗಳನ್ನು ಇರಿಸಬೇಕು. ಎಲ್ಲವನ್ನೂ ತೆರೆದಿರಿಸಿಟ್ಟಾಗ ಮತ್ತು ಅಲ್ಲಿ ಪೂರ್ತಿ ಶರಣಾಗತಿ ಇದ್ದಾಗ ದೈವೀ ಸಾಮರ್ಥ್ಯ ಸಾಧನೆಯನ್ನು ಎಷ್ಟೊಂದು ಇಡಿಯಾಗಿ ಕೈಗೆತ್ತಿಕೊಳ್ಳುತ್ತದೆಂದರೆ, ಇನ್ನು ಮುಂದೆ ವ್ಯಕ್ತಿಗತ ಪ್ರಯತ್ನದ ಆವಶ್ಯಕತೆ ಇರುವುದಿಲ್ಲ. ಆದರೆ ಅದು ಮುಂಚಿನ ಹಂತದಲ್ಲಿ ಸಂಭವಿಸಲಾರದು – ಮನುಷ್ಯ ಕೊನೆಯ ಹಂತ ಬರುವವರೆಗೆ ತನ್ನನ್ನು ತೆರೆದಿರಿಸುತ್ತ, ಮುಡಿಪಾಗಿರಿಸುತ್ತ ಶರಣಾಗತಿಯನ್ನು ಕೈಕೊಳ್ಳುತ್ತ ಸಾಗಿ ಹೋಗಬೇಕು.

**CWSA, 32/220** **– ಶ್ರೀ ಅರವಿಂದರು**

*

ಪ್ರಾಣಿಕದ ದೋಷಗಳು ಮತ್ತು ತೊಂದರೆಗಳು ಹಾಗೆಯೇ ಮನಸ್ಸಿನ ಕುಂದುಕೊರತೆಗಳು ಎಲ್ಲರಲ್ಲಿ ಒಂದೇ ರೀತಿಯವಾಗಿರುತ್ತವೆ. ನಂಬಿಕೆ ಮತ್ತು ಆತ್ಮವಿಶ್ವಾಸಗಳಿಂದ ಮನುಷ್ಯ ಭಗವಂತನತ್ತ ತನ್ನನ್ನು ತೆರೆದಿರಿಸಿಕೊಳ್ಳಬೇಕು; ಶ್ರೀಮಾತೆಯವರ ದೈವೀ ಶಕ್ತಿ ಕ್ರಮೇಣ ಪ್ರತಿಯೊಂದನ್ನೂ ಸರಿಯಾಗಿರಿಸುತ್ತದೆ.

**CWSA, 32/218** **– ಶ್ರೀ ಅರವಿಂದರು**

*

## ಅತ್ಯಂತ ಮಹತ್ವದ್ದಾದ ಪ್ರಯತ್ನ

ಅಭೀಪ್ಸೆ, ನಿರಾಕರಣ ಹಾಗೂ ಸಮರ್ಪಣ ಇವುಗಳನ್ನು ಕುರಿತಾದ ಪ್ರಯತ್ನವನ್ನು ಸಾಧಕನಿಂದ ಒತ್ತಾಯಪೂರ್ವಕವಾಗಿ ಕೇಳಲಾಗಿದೆ. ಈ ಮೂರು ವಿಷಯಗಳನ್ನು ಕೈಕೊಂಡಾಗ ಉಳಿದದ್ದೆಲ್ಲ ಶ್ರೀಮಾತೆಯವರ ದೈವೀ ಕೃಪೆ ಮತ್ತು ಅವರು ನಿಮ್ಮಲ್ಲಿ ಕಾರ್ಯ ಮಾಡುವ ಶಕ್ತಿ ಇವುಗಳ ಮೂಲಕ ತಾನೇ ಬರುತ್ತದೆ. ಈ ಮೂರರಲ್ಲಿ ಸಮರ್ಪಣ ಇಲ್ಲವೆ ಶರಣಾಗತಿ ಅತ್ಯಂತ ಮಹತ್ವದ್ದಾಗಿರುತ್ತದೆ. ಅದರ ಮೊದಲ ಅವಶ್ಯವಾದ ರೂಪ ತೊಂದರೆ ಇದ್ದಾಗ ವಿಶ್ವಾಸ, ಗಾಢನಂಬಿಕೆ ಮತ್ತು ತಾಳ್ಮೆ ಇವುಗಳನ್ನು ಹೊಂದಿರುವುದಾಗಿರುತ್ತದೆ. ಅಭೀಪ್ಸೆ ಇದ್ದರೆ ಮಾತ್ರ, ವಿಶ್ವಾಸ ಹಾಗೂ ಗಾಢನಂಬಿಕೆ ಮತ್ತು ತಾಳ್ಮೆ ಉಳಿದುಕೊಳ್ಳಬಲ್ಲವು. ಅಭೀಪ್ಸೆ ನಿಷ್ಕ್ರಿಯವಾದಾಗ ವಿಶ್ವಾಸ ಹಾಗೂ ಗಾಢನಂಬಿಕೆಗಳು ವಿಫಲವಾದರೆ ಅದರರ್ಥ ಸಾಧಕ ತನ್ನದೇ ಪ್ರಯತ್ನವನ್ನು ನೆಚ್ಚಿಕೊಂಡಿರುತ್ತಾನೆ ಎಂದಾಗುತ್ತದೆ – "ಓ ನನ್ನ ಅಭೀಪ್ಸೆ ವಿಫಲವಾಗುತ್ತಿದೆ, ಹಾಗಾಗಿ ನನ್ನಲ್ಲಿ ಭರವಸೆ ಉಳಿದುಕೊಂಡಿಲ್ಲ. ನನ್ನ ಅಭೀಪ್ಸೆ ವಿಫಲವಾಗುತ್ತಿದೆ, ಅದಕ್ಕೆ ಶ್ರೀಮಾತೆಯವರು ಏನು ಮಾಡಬಲ್ಲರು?" ಎಂದು ಅದರ ಅರ್ಥವಾಗುತ್ತದೆ. ತದ್ವಿರುದ್ಧವಾಗಿ ಸಾಧಕ ತಂದುಕೊಳ್ಳಬೇಕಾದ ಭಾವನೆ ಎಂದರೆ: "ಅದಕ್ಕೆ ಲಕ್ಷ್ಯಗೊಡುವುದು ಬೇಡ, ನನ್ನ ಅಭೀಪ್ಸೆ ಮತ್ತೆ ಮರಳಿ ಬರುವುದು. ಅಷ್ಟರಲ್ಲಿ ಶ್ರೀಮಾತೆಯವರ ಬಗ್ಗೆ ನನಗೆ ಭಾವನೆ ಬರದೇ ಇದ್ದಾಗಲೂ ಅವರು ನನ್ನೊಂದಿಗೆ ಇದ್ದಾರೆ ಎಂಬುದು ನನಗೆ ತಿಳಿದಿದೆ, ಅವರು ನನ್ನನ್ನು ಅತ್ಯಂತ ಅಂಧಕಾರವಿರುವ ಅವಧಿಯಾದ್ಯಂತ ನನ್ನನ್ನು ಕರೆದೊಯ್ಯುತ್ತಾರೆ" ಎಂಬುದಾಗಿದೆ. ಅದು ನೀವು ಹೊಂದಿರಬೇಕಾದ ಪೂರ್ತಿ ಸರಿಯಾದ ಮನೋಭಾವವಾಗಿರುತ್ತದೆ. ಆ ಮನೋಭಾವ ಹೊಂದಿದವರಿಗೆ ಖಿನ್ನತೆ ಏನನ್ನೂ ಮಾಡಲಾರದು, ಅದು ಬಂದಾಗಲೂ ಕೂಡ, ತಬ್ಬಿಬ್ಬಾಗಿ ಮರಳಿ ಹೋಗಬೇಕಾಗುವುದು. ಅದು ತಾಮಸಿಕ ಶರಣಾಗತಿಯಾಗಿರುವುದಿಲ್ಲ. "ನಾನೇನನ್ನೂ ಕೈಕೊಳ್ಳುವುದಿಲ್ಲ, ಶ್ರೀಮಾತೆಯವರೇ ಎಲ್ಲವನ್ನೂ ಕೈಕೊಳ್ಳಲಿ. ಅಭೀಪ್ಸೆ, ನಿರಾಕರಣ, ಸಮರ್ಪಣ ಇವೆಲ್ಲ ಅವಶ್ಯವಾಗಿರುವುದಿಲ್ಲ. ಅವರೇ ನನ್ನಲ್ಲಿ ಎಲ್ಲವನ್ನೂ ಕೈಕೊಳ್ಳಲಿ" ಎಂದು ಮನುಷ್ಯ ಹೇಳಿದಾಗ ಅದು ತಾಮಸಿಕ ಶರಣಾಗತಿಯಾಗಿರುತ್ತದೆ. ಇವೆರಡೂ ಮನೋಭಾವಗಳ ನಡುವೆ ಬಹಳ ದೊಡ್ಡ ವ್ಯತ್ಯಾಸವಿದೆ.

ಒಂದು ಮನೋಭಾವ ಮೈಗಳ್ಳ(shirker)ನದಾಗಿರುತ್ತದೆ, ಅವನು ಏನನ್ನೂ ಕೈಕೊಳ್ಳುವುದಿಲ್ಲ, ಇನ್ನೊಬ್ಬನದು ತನಗೆ ಸಾಧ್ಯವಿದ್ದಷ್ಟು ಅತ್ಯಂತ ಒಳ್ಳೆಯ ರೀತಿಯಲ್ಲಿ ಕಾರ್ಯ ಮಾಡುವವನ ಮನೋಭಾವ; ಆದರೆ ಅವನು ಕೆಲಕಾಲದ ವರೆಗೆ ನಿಷ್ಕ್ರಿಯನಾಗಿ ಉಳಿದುಕೊಳ್ಳುವಂತಾದರೆ, ಮತ್ತು ವಿಷಯಗಳು ಪ್ರತಿಕೂಲ(adverse)ವಾದರೆ, ಅವನು ಎಲ್ಲದರ ಹಿಂದಿರುವ ಶ್ರೀಮಾತೆಯವರ ಶಕ್ತಿಯಲ್ಲಿ ಹಾಗೂ ಸಾನ್ನಿಧ್ಯದಲ್ಲಿ, ಯಾವಾಗಲೂ, ವಿಶ್ವಾಸವನ್ನು ಕಾಪಾಡಿಕೊಂಡು ಬರುತ್ತಾನೆ ಮತ್ತು ಆ ವಿಶ್ವಾಸದ ಮೂಲಕ ವಿರೋಧಿ ಶಕ್ತಿ ತಬ್ಬಿಬ್ಬುಗೊಳ್ಳುವಂತೆ ಮಾಡುತ್ತಾನೆ ಮತ್ತು ಸಾಧನೆಯ ಚಟುವಟಿಕೆ ಮರಳಿ ಬರುವುದಕ್ಕೆ ಕರೆ ಕೊಡುತ್ತಾನೆ.

**CWSA, 32/139–40** **– ಶ್ರೀ ಅರವಿಂದರು**

*

## ಶ್ರೀಮಾತೆಯವರ ದೈವೀ ಶಕ್ತಿ

### ಶ್ರೀಮಾತೆಯವರ ದೈವೀ ಶಕ್ತಿ ಭಗವಂತನ ದೈವೀ ಶಕ್ತಿಯಾಗಿದೆ

**ಪ್ರಶ್ನೆ :** *ನೀವು ಅನೇಕ ಸಲ ಶ್ರೀಮಾತೆಯವರ ದೈವೀ ಶಕ್ತಿ ಕುರಿತು ಹೇಳಿದ್ದೀರಿ, ಅದೆಂದರೇನು?*

**ಶ್ರೀ ಅ :** ಅದು ಭಗವಂತನ ದೈವೀ ಶಕ್ತಿ, ಅಜ್ಞಾನವನ್ನು ತೆಗೆದು ಹಾಕಲು ಮತ್ತು ಸ್ವಭಾವವನ್ನು ದೈವೀ ಸ್ವಭಾವವನ್ನಾಗಿ ಬದಲು ಮಾಡಲು ಕಾರ್ಯ ಕೈಕೊಳ್ಳುತ್ತದೆ.

*

**ಪ್ರಶ್ನೆ :** *ಈ ಕಾರ್ಯವನ್ನು, ಆ ಕಾರ್ಯವನ್ನು ನಾನು ಮಾಡುತ್ತಿದ್ದೇನೆ ಎಂಬ ಭಾವನೆ ನನಗೇಕೆ ಬರುತ್ತದೆ? ಏಕೆಂದರೆ ನಮ್ಮಲ್ಲಿರುವುದೆಲ್ಲವನ್ನೂ ಶ್ರೀಮಾತೆಯವರ ಶಕ್ತಿ ಕೈಕೊಳ್ಳುತ್ತದೆ ಎಂಬುದು ನಿಜವಲ್ಲವೆ?*

**ಶ್ರೀ ಅ :** ನಾನು ಶ್ರೀಮಾತೆಯವರ ಶಕ್ತಿಯನ್ನು ಕುರಿತು ಹೇಳಿದಾಗ, ಅವಿದ್ಯೆಯಲ್ಲಿ ಕಾರ್ಯಗಳನ್ನು ಕೈಕೊಳ್ಳುವ ಪ್ರಕೃತಿಯ ಶಕ್ತಿಯನ್ನು ಕುರಿತು ಹೇಳಿರುವುದಿಲ್ಲ,

ಆದರೆ ಸ್ವಭಾವವನ್ನು ಪರಿವರ್ತಿಸಲು ಮೇಲ್ಗಡೆಯಿಂದ ಕೆಳಗಿಳಿದು ಬರುವ ಉಚ್ಚತರ ದೈವೀ ಶಕ್ತಿಯನ್ನು ಕುರಿತು ಹೇಳಿರುತ್ತೇನೆ.

**CWSA, 32/193** **– ಶ್ರೀ ಅರವಿಂದರು**

*

**ದೋಷಗಳ ನಿವಾರಣೆ**

ತಳಮಳಗೊಳ್ಳುವ ಈ ಮನಸ್ಸು ಮತ್ತು ಶಾಂತಿಯಿಂದಿರದ ಪ್ರಾಣಿಕ ನಿನಗೆ ವಿಶೇಷವಾದವುಗಳಲ್ಲ, ಅವು ಮಾನವ ಸ್ವಭಾವಕ್ಕೆ ಸೇರಿದವುಗಳಾಗಿವೆ, ಸಾಧಕ (ಯೋಗವನ್ನು) ಅವುಗಳಿದ್ದಲ್ಲಿಂದ ಪ್ರಾರಂಭಿಸುತ್ತಾನೆ. ನೀನು ಶ್ರೀಮಾತೆಯವರ ಶಕ್ತಿ ಹಾಗೂ ದೈವೀ ಕೃಪೆ ದೊರಕಿಸಬೇಕು, ಅವು ತಮ್ಮೊಂದಿಗೆ ಬಿಡುಗಡೆ, ಶಾಂತಿ ಹಾಗೂ ಆನಂದ ಇವುಗಳನ್ನು ತರುತ್ತವೆ, ನೀನು ಅವುಗಳನ್ನು ಕುರಿತು ಅನುಭವ ಆಗಾಗ ಆಗುತ್ತಿರುತ್ತದೆಂದು ಹೇಳುತ್ತೀ. ಅದು ಪ್ರಾರಂಭದಲ್ಲಿ ಅಲ್ಪ ಕಾಲದವರೆಗೆ ಮಾತ್ರ ಬರುತ್ತದೆ, ಆದರೆ ನೀನು (ಆಧ್ಯಾತ್ಮಿಕ) ಮಾರ್ಗದಲ್ಲಿ ಪಟ್ಟು ಹಿಡಿದು ಸಾಗುತ್ತಿದ್ದಂತೆ ಪುನರಾವರ್ತನೆ ಹೆಚ್ಚಾಗುತ್ತದೆ, ಅನುಭವ ಹೆಚ್ಚಿನ ಸಮಯದ ವರೆಗೆ ಉಳಿದುಕೊಳ್ಳುತ್ತದೆ, ಕೊನೆಗೆ ಶಾಶ್ವತ ಅನುಭವವಾಗುತ್ತದೆ. ಈ ವಿಧಾನ ನೀನು ತೋಡಿಕೊಳ್ಳುತ್ತಿರುವ ದೋಷಗಳನ್ನು ನಿವಾರಿಸುತ್ತದೆ.

**CWSA, 32/195** **– ಶ್ರೀ ಅರವಿಂದರು**

*

ಶ್ರೀಮಾತೆಯವರ ದೈವೀ ಶಕ್ತಿ ಸತ್ತೆಯ ತುತ್ತತುದಿಯ ಮೇಲಷ್ಟೇ ಇರುವುದಿಲ್ಲ. ಅದು ಅಲ್ಲಿ ನಿನ್ನೊಂದಿಗೆ, ನಿನ್ನ ಹತ್ತಿರ ಇರುತ್ತದೆ. ನಿನ್ನ ಸ್ವಭಾವ ಅದಕ್ಕೆ ಅನುವು ಮಾಡಿಕೊಟ್ಟಾಗ ಕೂಡಲೇ ಕಾರ್ಯ ಕೈಕೊಳ್ಳುವುದಕ್ಕೆ ತಯಾರಾಗಿರುತ್ತದೆ. ಇಲ್ಲಿರುವ ಎಲ್ಲರೊಂದಿಗೆ ಅದು ಆ ರೀತಿಯದಾಗಿದೆ

**CWSA, 32/197** **– ಶ್ರೀ ಅರವಿಂದರು**

*

**ಪ್ರಶ್ನೆ :** *ಸಾಧಕ ಸರಿಯಾದ ಮನೋಭಾವದಿಂದ ಕಾರ್ಯ ಕೈಕೊಳ್ಳುತ್ತಿದ್ದಾಗ ಮತ್ತು ಉಚ್ಚತರ ದೈವೀ ಶಕ್ತಿ ಅವನಲ್ಲಿ ನೇರವಾಗಿ ಕಾರ್ಯ ಮಾಡುತ್ತಿದ್ದಾಗ, ಆ*

*ದೈವೀ ಶಕ್ತಿ ಅವನ ದೋಷಗಳನ್ನು ಹಾಗೂ ಅಪರಿಪೂರ್ಣತೆಗಳನ್ನು ಹೇಗೆ ತೆಗೆದು ಹಾಕುತ್ತದೆ?*

**ಶ್ರೀ ಅ :** ಅದು ಆಂತರಿಕ ಪ್ರಜ್ಞೆಯನ್ನು ಕ್ರಮೇಣ ಇಲ್ಲವೆ ತೀವ್ರಗತಿಯಿಂದ ಜಾಗ್ರತಗೊಳಿಸುತ್ತ ಕಾರ್ಯ ಮಾಡುತ್ತದೆ; ಆ ಕಾರ್ಯವನ್ನು ಅಹಂಕಾರಕ್ಕೆ ಸೇವೆ ಸಲ್ಲಿಸುವ ತತ್ವದ ಸ್ಥಾನದಲ್ಲಿ ಭಗವಂತನಿಗೆ ಸೇವೆ ಸಲ್ಲಿಸುವ ತತ್ವವನ್ನಿರಿಸುವುದರ ಮೂಲಕ, ತನ್ನ ಕಾರ್ಯಗಳನ್ನು ಅವನು ಗಮನಿಸುವಂತೆ, ತನ್ನದೇ ದೋಷಗಳನ್ನು ನೋಡುವಂತೆ ಹಾಗೂ ಅವುಗಳನ್ನು ನಿವಾರಿಸಲು ಅವನನ್ನು ಮುಂದೆ ದೂಡುವುದರ ಮೂಲಕ, ಅವನ ಪ್ರಜ್ಞೆ ಹಾಗೂ ಶ್ರೀಮಾತೆಯವರ ಪ್ರಜ್ಞೆ ಇವುಗಳ ನಡುವೆ ಸಂಪರ್ಕವನ್ನು ಸ್ಥಾಪಿಸುವುದರ ಮೂಲಕ, ಅವನ ಸ್ವಭಾವವನ್ನು ಶ್ರೀಮಾತೆಯವರ ಪ್ರಜ್ಞೆ ಹಾಗೂ ಶಕ್ತಿ ಇವು ಹೆಚ್ಚು ಹೆಚ್ಚಾಗಿ ಕೈಗೆತ್ತಿಕೊಳ್ಳುವಂತೆ ತಯಾರು ಮಾಡುವುದರ ಮೂಲಕ, ಯೋಗದ ಪ್ರಧಾನ ಅನುಭವಗಳಿಗೆ ಅವನನ್ನು ಸಿದ್ಧಗೊಳಿಸಲು ಸಹಾಯ ಮಾಡುವ ಅನುಭವಗಳನ್ನು ಅವನಿಗೆ ಕೊಡುವುದರ ಮೂಲಕ, ಅವನ ಚೈತ್ಯ ಸತ್ತೆಯ ಬೆಳವಣಿಗೆಯನ್ನು ಉದ್ದೀಪನಗೊಳಿಸುವುದರ ಮೂಲಕ, ಶ್ರೀಮಾತೆಯವರು ವಿಶ್ವಂಭರ ಸತ್ತೆ ಎನ್ನುವುದರತ್ತ ಅವನನ್ನು ತೆರೆದಿರಿಸುವುದರ ಮೂಲಕ ಇತ್ಯಾದಿಗಳ ಮೂಲಕ ಕೈಕೊಳ್ಳಲಾಗುವುದು. ಸ್ವಾಭಾವಿಕವಾಗಿ ಭಿನ್ನ ವ್ಯಕ್ತಿಗಳ ಮೇಲೆ ಭಿನ್ನ ರೀತಿಯಲ್ಲಿ ಅದು ಕಾರ್ಯ ಕೈಕೊಳ್ಳುತ್ತದೆ.

**CWSA, 32/198** **– ಶ್ರೀ ಅರವಿಂದರು**

*

**ಶ್ರೀಮಾತೆಯವರ ದೈವೀ ಶಕ್ತಿಯನ್ನು ಸ್ವೀಕರಿಸುವುದು**

ಶ್ರೀಮಾತೆಯವರ ದೈವೀ ಶಕ್ತಿಯನ್ನು ಕುರಿತು ಹೇಳುವುದಾದರೆ ಮನುಷ್ಯ ಅದನ್ನು ಪಡೆದಾಗ ಇರಬೇಕಾದ ಅತ್ಯಂತ ಒಳ್ಳೆಯ ರೀತಿಯೆಂದರೆ, ಅದನ್ನು ಮೈಗೂಡಿಸಿಕೊಳ್ಳುವವರೆಗೆ ನಿಶ್ಚಲರಾಗಿ ಉಳಿದುಕೊಳ್ಳಬೇಕು, ನಂತರ ಅದೆಲ್ಲ ಸರಿಯಾಗಿರುತ್ತದೆ, ಬಾಹ್ಯ ಚಲನೆಗಳ ಮೂಲಕ ಇಲ್ಲವೆ ಮಿಶ್ರಣಕ್ಕೊಳಗಾಗುವು–ದರಿಂದ ಅದು ಕಳೆದು ಹೋಗುವುದಿಲ್ಲ.

**ಪ್ರಶ್ನೆ :** *ನಾನು ಧ್ಯಾನ ಮಾಡಲು ಪ್ರಯತ್ನಿಸಿದೆ, ಮನಸ್ಸು ಸಹಕಾರ ನೀಡದೆ ಹೋದುದರಿಂದ ನಾನದನ್ನು ಕೈಬಿಡಬೇಕಾಯಿತು.*

**ಶ್ರೀ ಅ :** ನೀನು ಧ್ಯಾನ ಮಾಡಲು ಸಾಧ್ಯವಾಗದೇ ಇದ್ದಾಗ ನಿಶ್ಚಲತೆಯಿಂದ ಕುಳಿತುಕೋ. ಮತ್ತು ಶ್ರೀಮಾತೆಯವರ ದೈವೀ ಶಾಂತಿಗೆ ಇಲ್ಲವೆ ದೈವೀ ಸಾಮರ್ಥ್ಯಕ್ಕೆ ಅಂತರಂಗದಲ್ಲಿ ಬರಲು ಕರೆ ಕೊಡು.

**CWSA, 32/215** **– ಶ್ರೀ ಅರವಿಂದರು**

*

ನೀವು ಕೈಕೊಳ್ಳಬೇಕಾದುದು ಏನೆಂದರೆ ಗಾಢ ನಂಬಿಕೆ ಹೊಂದಿರುವುದಾಗಿದೆ ಮತ್ತು ಯಾವಾಗಲೂ ಆತ್ಮವಿಶ್ವಾಸದಿಂದ, ಮತ್ತು ಉಲ್ಲಸಿತರಾಗಿ ಉಳಿದು–ಕೊಳ್ಳುವುದಾಗಿದೆ. ನಿಮಗೆ ಖಿನ್ನತೆ ಇರುವ ಭಾವನೆ ಬಂದಾಗ ಆ ಖಿನ್ನತೆಯನ್ನು ತೆಗೆದು ಹಾಕಲು ಶ್ರೀಮಾತೆಯವರ ದೈವೀ ಶಕ್ತಿಗೆ ಕರೆ ಕೊಡಿರಿ. ನೀವು ರೋಗಗ್ರಸ್ತರಾದರೆ ನಿಮಗೆ ಚಿಕಿತ್ಸೆ ನೀಡಲು ಶ್ರೀಮಾತೆಯವರ ದೈವೀ ಶಕ್ತಿಗೆ ಕರೆ ಕೊಡಿರಿ. ನೀವು ಕಾರ್ಯ ಕೈಕೊಳ್ಳುತ್ತಿದ್ದಾಗ, ನಿಮಗೆ ಆಧಾರ ನೀಡಲು ಮತ್ತು ನಿಮ್ಮ ಮೂಲಕ ಕಾರ್ಯ ಕೈಕೊಳ್ಳಲು ಶ್ರೀಮಾತೆಯವರ ಶಕ್ತಿಗೆ ಕರೆ ಕೊಡಿರಿ.

ತೊಂದರೆಗಳೇನೇ ಇರಲಿ, ಅವು ನಿಮ್ಮನ್ನು ಕ್ಷೋಭೆಗೊಳಪಡಿಸುವುದಕ್ಕೆ ಇಲ್ಲವೆ ಎದೆಗುಂದಿಸುವುದಕ್ಕೆ ಅನುವು ಮಾಡಿಕೊಡುವುದು ಬೇಡ, ಆದರೆ ಅಚಂಚಲತೆಯಿಂದ ಮತ್ತು ಸರಳ ರೀತಿಯಿಂದ ಶ್ರೀಮಾತೆಯವರ ದೈವೀ ಶಕ್ತಿಗೆ ನಿಮ್ಮನ್ನು ತೆರೆದಿರಿಸಿರಿ ಮತ್ತು ಅದು ನಿಮ್ಮನ್ನು ಬದಲು ಮಾಡುವುದಕ್ಕೆ ಅನುವು ಮಾಡಿಕೊಡಿರಿ.

**CWSA, 32/218** **– ಶ್ರೀ ಅರವಿಂದರು**


*

ಅವಳೇ ಚಿನ್ನದ ಸೇತುವೆ, ಅಚ್ಚರಿ ತರುವ ಜ್ವಾಲೆ,
ದೇವನಾಳಗಳಲಿ ನಿಶ್ಚಲ ನೀರವತೆಯ ಸಾಮರ್ಥ್ಯ;
ಅಜ್ಞಾತವಾದವನ ಪ್ರಕಾಶಮಯ ಹೃದಯ ಅವಳು;
ಅವಳೇ ದೈವೀ ಶಕ್ತಿ, ಅನಿವಾರ್ಯ ದೈವೀ ಶಬ್ದ,
ನಮ್ಮ ಕಷ್ಟಕರ ಆರೋಹಣದ ಚುಂಬಕ ಶಕ್ತಿ
ನಮ್ಮ ಜ್ಯೋತಿಗಳನೆಲ್ಲ ಬೆಳಗಿಸುವ ದಿವ್ಯ ಸೂರ್ಯ
ಸಿದ್ಧಿಸಿಕೊಂಡಿರದ ದಿವ್ಯ ವಿಸ್ತಾರಗಳೆಡೆಯಿಂದ ವಾಲುವ ದಿವ್ಯ ಪ್ರಕಾಶ,

ಅಸಾಧ್ಯವಾದುದರಿಂದ ಸಂಜ್ಞೆಯಲಿ ಬರುವಂತೆ ಕರೆವ ಸಂತೋಷ,
ಇನ್ನೂ ಕೆಳಗಿಳಿದು ಬರದ ಎಲ್ಲದರ ದಿವ್ಯ ಸಾಮರ್ಥ್ಯ.
ಜೀವನದ ನೋವಿನ ಬಡಿತವನು ತನ್ನ ಪಾದಗಳಿಂದ ವಾಸಿಗೊಳಿಸಲು,
ಮಾನವನ ಮಸುಕಾದ ಆತ್ಮದ ಮೇಲಿನ ಮುದ್ರೆಗಳನೊಡೆಯಲು,
ವಸ್ತುಗಳ ಮುಚ್ಚಿದ ಹೃದಯಗಳಲಿ ಜ್ವಾಲೆಯನು ಹೊತ್ತಿಸಲು,
ಎಲ್ಲ ಪ್ರಕೃತಿ ಮೂಕ ಕರೆ ಕೊಡುತಿಹುದು ಅವಳಿಗೆ ಮಾತ್ರ.

**'ಸಾವಿತ್ರಿ' ಪು. 314** **– ಶ್ರೀ ಅರವಿಂದರು**

*



ಸಾಂಸಾರಿಕ ಜೀವನ ಅದರ ಸ್ವಭಾವದಲ್ಲಿ ತಳಮಳವಿರುವ ಕ್ಷೇತ್ರವಾಗಿರುತ್ತದೆ. – ಅದರೊಳಗಿಂದ ಸರಿಯಾದ ರೀತಿಯಲ್ಲಿ ಸಾಗಿ ಹೋಗಲು ಮನುಷ್ಯ ತನ್ನ ಜೀವನವನ್ನು ಹಾಗೂ ಕಾರ್ಯಗಳನ್ನು ದೇವನಿಗೆ ಅರ್ಪಿಸಬೇಕು ಮತ್ತು ಅಂತರಂಗದಲ್ಲಿರುವ ದೇವ ನೀಡುವ ಶಾಂತಿಗಾಗಿ ಪ್ರಾರ್ಥಿಸಬೇಕು. ಮನಸ್ಸು ಅಚಂಚಲವಾಗಿದ್ದಾಗ ಶ್ರೀಮಾತೆಯವರು ಜೀವನಕ್ಕೆ ಆಧಾರ ನೀಡುತ್ತಿರುವುದರ ಭಾವನೆಯನ್ನು ಮನುಷ್ಯ ತಂದುಕೊಳ್ಳಬಲ್ಲ ಮತ್ತು

ಪ್ರತಿಯೊಂದನ್ನು ಅವರ ಹಸ್ತಗಳಲ್ಲಿರಿಸಬಲ್ಲ. – ಅವಳಿಗೆ (ಪ್ರಶ್ನೆ ಕೇಳಿದವಳಿಗೆ) ಶಾಂತಿ ಬೇಕಾಗಿದ್ದರೆ ಇವುಗಳನ್ನು ಮೊದಲು ಕೈಕೊಳ್ಳಬೇಕು.

*

ಇಲ್ಲ, ಆಶ್ರಮದಲ್ಲಿರುವುದಷ್ಟೇ ಸಾಕಾಗುವುದಿಲ್ಲ – ಮನುಷ್ಯ ಶ್ರೀಮಾತೆಯವರಿಗೆ ತನ್ನನ್ನು ತೆರೆದಿರಿಸಿಟ್ಟುಕೊಳ್ಳಬೇಕು, ಜಗತ್ತಿನಲ್ಲಿ ಕಳಂಕ ತರುವಂತಹದರ ಜೊತೆಗೆ ಆಟವಾಡುವುದನ್ನು ಕೊನೆಗೊಳಿಸಬೇಕು.

**CWSA, 32/143, 156** – ಶ್ರೀ ಅರವಿಂದರು

*



ಯೋಗಿಯಾಗುವುದಾಗಲಿ, ಸನ್ಯಾಸಿಯಾಗುವುದಾಗಲಿ ಇಲ್ಲವೆ ತಪಸ್ವಿ–ಯಾಗುವುದಾಗಲಿ ಇಲ್ಲಿ ಮುಖ್ಯ ಗುರಿಯಾಗಿರುವುದಿಲ್ಲ. ಪರಿವರ್ತನೆಯನ್ನು ಗುರಿಯಾಗಿರಿಸಿಕೊಳ್ಳಲಾಗಿದೆ. ನಿಮ್ಮದೇ ಶಕ್ತಿಗಿಂತ ಅನಂತಪಟ್ಟು ಶ್ರೇಷ್ಠವಾದ ಶಕ್ತಿಯಿಂದ ಮಾತ್ರ ಪರಿವರ್ತನೆಯನ್ನು ಸಿದ್ಧಿಸಿಕೊಳ್ಳಬಹುದು. ಶ್ರೀಮಾತೆಯವರ

ಹಸ್ತಗಳಲ್ಲಿ ಒಂದು ಮಗುವಿನಂತಾಗುವುದರ ಮೂಲಕ ಮಾತ್ರ ಅದನ್ನು ಕೈಕೊಳ್ಳಲಾಗುವುದು.

**CWSA, 32/143** **– ಶ್ರೀ ಅರವಿಂದರು**

*

ಅವಳು[1] ಅವರ ಹಸ್ತಗಳನ್ನು ಹಿಡಿದುಕೊಂಡಳು, ಅವರಿಗಾಗಿ ಅವರ
ಮಾರ್ಗಗಳನು ಅಯ್ದುಕೊಟ್ಟಳು
ಶ್ರೇಷ್ಠ ಅಜ್ಞಾತ ವಿಷಯಗಳತ್ತ ಅವರು ಮುಂದುವರಿಯುವಂತೆ
ಮಾಡಲಾಗಿಹುದು
ನಂಬಿಕೆ, ಹಾಗೂ ತಾವು ಅವಳವರಾಗಿರುವೆವು ಎಂಬ ಭಾವನೆ ಅವರನು
ಎಳೆದಿಹುದು
ಅವರು ಅವಳಲ್ಲಿ ಜೀವಿಸಿದರು, ಅವಳ ಕಣ್ಗಳ ಮೂಲಕ ಜಗತ್ತನ್ನು
ನೋಡಿದರು.

**'ಸಾವಿತ್ರಿ' ಪು. 364** **– ಶ್ರೀ ಅರವಿಂದರು**

*

## ಶ್ರೀಮಾತೆಯವರಿಗೆ ತೆರೆದಿರಿಸಿಕೊಳ್ಳಿರಿ

**ಶ್ರೀಮಾತೆಯವರಿಗೆ ತೆರೆದಿರಿಸಿಕೊಳ್ಳುವುದನ್ನು ಕಾಪಾಡಿಕೊಂಡು ಬರಬೇಕು**

**ಪ್ರಶ್ನೆ :** *ನನಗೆ ಧ್ಯಾನ ಮಾಡಲಿಕ್ಕಾಗುವುದಿಲ್ಲ, ಏಕೆಂದರೆ ನಾನು ಧ್ಯಾನ ಮಾಡಲು ಕುಳಿತುಕೊಂಡಾಗ ಮನಸ್ಸಿನಲ್ಲಿ ಹಲವಾರು ಯೋಚನೆಗಳು ಬರತೊಡಗುತ್ತವೆ. ಮುನ್ನಡೆದುಕೊಂಡು ಹೋಗಲು, ಶ್ರೀಮಾತೆಯವರು ನನ್ನಲ್ಲಿ ಕಾರ್ಯ ಕೈಕೊಳ್ಳುವಂತಾಗಲು ನಾನು ಯಾವ ಮಾರ್ಗವನ್ನು ಅನುಸರಿಸಬೇಕು.*

**ಶ್ರೀ ಅ :** ನಿನಗೆ ಧ್ಯಾನ ಮಾಡುವುದು ಸಾಧ್ಯವಾಗದೇ ಹೋದರೆ ಪ್ರಾರ್ಥನೆ ಮಾಡು. ನೀನು ಕೈಕೊಳ್ಳುತ್ತಿರುವುದನ್ನೆಲ್ಲ ಶ್ರೀಮಾತೆಯವರಿಗೆ ಅರ್ಪಿಸು ಮತ್ತು ನಿನ್ನ ಕ್ರಿಯೆ ಹಾಗೂ ಸ್ವಭಾವ ಇವುಗಳ ಮೇಲೆ ನಿಯಂತ್ರಣವನ್ನಿರಿಸಿರೆಂದು ಅವರಿಗೆ ಪ್ರಾರ್ಥಿಸು.

---

1 ಅವಳು – ಶ್ರೀಮಾತೆ

ದೈವೀ ಪ್ರೇಮವನಿಟ್ಟುಕೊಂಡು ಪೂಜಿಸು. ಪೂರ್ತಿ ತೆರೆದಿರಿಸಿಕೊಳ್ಳುವಿಕೆಯ ಆವಶ್ಯಕತೆ ಇದೆ, ಅದರಲ್ಲಿ ಶ್ರೀಮಾತೆಯವರ ಬಗ್ಗೆ ಅರಿವನ್ನು ತಂದುಕೊಳ್ಳುವಿ. ಈ ವಿಷಯಗಳು ತೆರೆದಿರಿಸಿಕೊಳ್ಳುವಿಕೆಯನ್ನು ತರುತ್ತವೆ. ಅದಕ್ಕೆ ಹೆಚ್ಚು ಕಾಲ ಬೇಕಾದರೂ ಕೂಡ ನೀನು ಖಿನ್ನತೆ, ನಿರಾಶೆ ಇಲ್ಲವೆ ಬಂಡಾಯ ಇವುಗಳಿಗೆ ವಶವಾಗಬಾರದು – ಏಕೆಂದರೆ ಈ ವಿಷಯಗಳು ತೆರೆದಿಟ್ಟುಕೊಳ್ಳುವುದಕ್ಕೆ ಅಡ್ಡಿಯನ್ನುಂಟು ಮಾಡುತ್ತವೆ.

**CWSA, 32/159** – **ಶ್ರೀ ಅರವಿಂದರು**

*

ಇಡೀ ವಿಷಯ ಶ್ರೀಮಾತೆಯವರಿಗೆ ನಿನ್ನ ತೆರೆದಿರಿಸಿಕೊಳ್ಳುವಿಕೆಯನ್ನು ಕಾಪಾಡಿಕೊಂಡುಬರುವುದಾಗಿದೆ. ನಿರ್ಧಾರಕ ಅನುಭವಗಳಿಗಾಗಿ ಸ್ವಭಾವದ ತಯಾರಿ, ಯಾವಾಗಲೂ, ಹೆಚ್ಚು ಕಾಲ ತೆಗೆದುಕೊಳ್ಳಬಹುದು, ಮತ್ತು ಕೂಡಲೆ ಪರಿಣಾಮ ದೊರಕಿಸುವುದಕ್ಕಾಗಿ ಎದೆಗುಂದುವಿಕೆಯಾಗಲಿ, ತಾಳ್ಮೆ ಕಳೆದುಕೊಳ್ಳುವುದಾಗಲಿ ಇರುವುದಕ್ಕೆ ಆಸ್ಪದ ಕೊಡದೆ ತಯಾರಿಯನ್ನು ಮುಂದುವರಿಸಿಕೊಂಡು ಹೋಗಬೇಕು.

**CWSA, 32/159** – **ಶ್ರೀ ಅರವಿಂದರು**

*

### ಶ್ರೀಮಾತೆಯವರ ಛಾಯಾಚಿತ್ರಗಳಲ್ಲಿ ಅವರ ಸಾನ್ನಿಧ್ಯ

ಛಾಯಾಚಿತ್ರ ಕುರಿತು ನಿನಗಾದ ಅನುಭವ ಸೊಗಸಾದದ್ದು ಹಾಗೂ ನಿಜವಾದದ್ದು. ಶ್ರೀಮಾತೆಯವರಲ್ಲಿ ಭಕ್ತಿಯನ್ನಿರಿಸಿಕೊಂಡವನು ಅವರ ಸಾನ್ನಿಧ್ಯವನ್ನು ಛಾಯಾಚಿತ್ರದ ಮೂಲಕ ಭಾವನೆಗೆ ತಂದುಕೊಳ್ಳಬಹುದು. ಅಲ್ಲಿದ್ದುದು ಅವರ ನಿಜವಾದ ಸಾನ್ನಿಧ್ಯ, ಸೂಕ್ಷ್ಮ ಭೌತಿಕದಲ್ಲಿರುವ ಸಾನ್ನಿಧ್ಯ, ನಿನ್ನ ಭಾವನೆಗೆ ಬಂದುದೆಲ್ಲ ನಿಜವಾದದ್ದು. ನಿನ್ನ ಭೌತಿಕ ಮನಸ್ಸು ನಿಜವಾದ ಪ್ರಜ್ಞೆಗೆ ತೆರೆದುಕೊಳ್ಳುತ್ತಿರುವುದನ್ನು ಅದು ತೋರಿಸುತ್ತದೆ. ಈ ವಿಷಯ ಬೆಳವಣಿಗೆ ಹೊಂದುವುದು ಎಂಬುದು ನಿಶ್ಚಿತ ಮತ್ತು ಹಳೆಯ ಚಲನೆಗಳ ಅಲ್ಪಾವಶೇಷಗಳು (remnants) ಮಾಯವಾಗಲೇಬೇಕು.

**CWSA, 32/184** – **ಶ್ರೀ ಅರವಿಂದರು**

*

**ತೆರೆದಿರಿಸಿಕೊಳ್ಳುವಿಕೆಗೆ ಮಾರ್ಗ**

**ಪ್ರಶ್ನೆ :** *ನಿಜವಾದ ತೆರೆದಿರಿಸಿಕೊಳ್ಳುವಿಕೆ ಎಂದರೇನು?*

**ಶ್ರೀ ಅ :** ಶ್ರೀಮಾತೆಯವರ ಸಾನ್ನಿಧ್ಯ ಹಾಗೂ ಅವರ ಶಕ್ತಿಗಳನ್ನು ಗ್ರಹಿಸುವುದಾಗಿದೆ.

**ಪ್ರಶ್ನೆ :** *ತೆರೆದಿರಿಸಿಕೊಳ್ಳುವಿಕೆಗೆ ಸರಿಯಾದ ಹಾಗೂ ಪರಿಪೂರ್ಣವಾದ ನಿಯಮ ಯಾವುದು?*

**ಶ್ರೀ ಅ :** ಅಭೀಪ್ಸೆ, ಅಚಂಚಲತೆ, ಸ್ವೀಕರಿಸುವುದಕ್ಕೆ ಮನುಷ್ಯ ತನ್ನನ್ನು ವಿಸ್ತರಿಸಿಕೊಳ್ಳುವುದು ಮತ್ತು ನಿನ್ನಿಂದ ಭಗವಂತನನ್ನು ಮುಚ್ಚಿಹಾಕುವುದನ್ನೆಲ್ಲ ನಿರಾಕರಿಸುವುದು.

*

**ಪ್ರಶ್ನೆ :** *ಶ್ರೀಮಾತೆಯವರಿಗೆ ನಿಜವಾಗಿ ತೆರೆದಿರಿಸಿಕೊಂಡಿದ್ದರ ಕುರುಹುಗಳು ಏನಾಗಿರುತ್ತವೆ?*

**ಶ್ರೀ ಅ :** ಅದು ಒಮ್ಮೆಗೆ ತನ್ನನ್ನು ತೋರಿಸಿಕೊಡುತ್ತದೆ – ನಿಮಗೆ ದೈವೀ ಶಾಂತಿ, ಸಮತೆ, ವಿಸ್ತರಿಸಿಕೊಂಡಿರುವಿಕೆ, ಪ್ರಕಾಶ, ಆನಂದ, ದೈವೀ ಜ್ಞಾನ, ಬಲ ಇವುಗಳ ಬಗ್ಗೆ ಭಾವನೆ ತಂದುಕೊಂಡಾಗ, ಶ್ರೀಮಾತೆಯವರು ಹತ್ತಿರವಿರುವುದರ ಇಲ್ಲವೆ ಅವರ ಸಾನ್ನಿಧ್ಯದ ಇಲ್ಲವೆ ಅವರ ದೈವೀ ಶಕ್ತಿ ಕಾರ್ಯ ಮಾಡುತ್ತಿರುವುದರ ಭಾವನೆ ತಂದುಕೊಂಡಾಗ ಇತ್ಯಾದಿ. ಇವುಗಳಲ್ಲಿ ಯಾವುದಾದುದೊಂದರ ಭಾವನೆ ಬಂದಾಗ ಅದು ತೆರೆದಿರಿಸಿಕೊಳ್ಳುವಿಕೆ ಆಗಿರುತ್ತದೆ – ಹೆಚ್ಚಿನವುಗಳ ಬಗ್ಗೆ ಭಾವನೆ ಬಂದರೆ ತೆರೆದಿರಿಸಿಕೊಳ್ಳುವಿಕೆ ಹೆಚ್ಚು ಸಂಪೂರ್ಣವಾಗಿರುತ್ತದೆ.

*

**ಪ್ರಶ್ನೆ :** *ಸತ್ತೆಯ ಎಲ್ಲ ಗಂಟುಗಳನ್ನು ತೆರೆದಿರಿಸುವುದಕ್ಕೆ ಮಾರ್ಗ ಯಾವುದು?*

**ಶ್ರೀ ಅ :** ಅಭೀಪ್ಸೆ, ದೈವೀ ಶಕ್ತಿಯ ಕಾರ್ಯಗತಿಗಳಿಗೆ ಸತ್ತೆಯ ಒಪ್ಪಿಗೆ, ದೈವೀ ಶಕ್ತಿಯ ಅವರೋಹಣ ಹಾಗೂ ಕಾರ್ಯ ಕೈಕೊಳ್ಳುವಿಕೆ ಇವುಗಳ ಮೂಲಕ ತೆರೆದಿರಿಸಬಹುದು.

*

**ಪ್ರಶ್ನೆ :** *ತೆರೆದಿರಿಸಿಕೊಳ್ಳುವಿಕೆಯ ಅರ್ಥವೇನು? ಅದು "ಶ್ರೀಮಾತೆಯವರಿಂದ ಏನನ್ನೂ ರಹಸ್ಯವಾಗಿ ಇರಿಸಿಕೊಳ್ಳದೆ ಇರುವುದಾಗಿದೆಯೆ?"*

**ಶ್ರೀ ಅ :** ಅದು ತೆರೆದಿರಿಸಿಕೊಳ್ಳುವಿಕೆಯತ್ತ ಮೊದಲ ಹೆಜ್ಜೆ.

*

**ಪ್ರಶ್ನೆ :** *ಮನುಷ್ಯ ತೆರೆದಿರಿಸಿಕೊಳ್ಳುವುದು ಹೇಗೆ?*

**ಶ್ರೀ ಅ :** ಅಚಂಚಲವಾದ ಮನಸ್ಸಿನಲ್ಲಿ ನಂಬಿಕೆ ಹಾಗೂ ಶರಣಾಗತಿಯನ್ನು ಇರಿಸುವುದರ ಮೂಲಕ.

**CWSA, 32/150–51** **– ಶ್ರೀ ಅರವಿಂದರು**

*

ಶ್ರೀಮಾತೆಯವರಿಗೆ ಇಡಿಯಾಗಿ ತೆರೆದಿರಿಸಿಕೊಳ್ಳುವುದಕ್ಕಾಗಿ ನೀವು ಅಂತರಂಗದಲ್ಲಿ ಹಾಗೂ ಬಾಹ್ಯದಲ್ಲಿ ನಿಮ್ಮನ್ನು ತೆರೆದಿರಿಸಿಕೊಳ್ಳಬೇಕು. ನೀವು ಪರಿಪೂರ್ಣವಾಗಿ ಮುಚ್ಚುಮರೆ ಇಲ್ಲದವರಾಗಬೇಕು, ಮತ್ತು ಅವರಿಗೆ ಎಲ್ಲವನ್ನೂ ಹೇಳಬೇಕು. – ನಿಮ್ಮೊಳಗಿರುವುದೆಲ್ಲವನ್ನೂ ಸಾಚಾತನದಿಂದ ಅವರಿಗೆ ತೋರಿಸುವುದರಿಂದ ಕುಗ್ಗಿಕೊಳ್ಳಬಾರದು. ಅದು ಸಂಪೂರ್ಣವಾಗಿ ತೆರೆದಿರಿಸಿಕೊಳ್ಳುವಿಕೆಗೆ ನಿಮ್ಮನ್ನು ಒಮ್ಮೆಗೆ ಶಕ್ತರನ್ನಾಗಿ ಮಾಡುವುದು, ಮತ್ತು ಅವರು ನಿಮಗೆ ಪೂರ್ತಿ ಸಹಾಯ ನೀಡುವಂತಾಗುವುದು.

**CWSA, 32/15,5** **– ಶ್ರೀ ಅರವಿಂದರು**

*

**ಯಾವಾಗಲೂ ಶ್ರೀಮಾತೆಯವರತ್ತ ಹೊರಳಿರಿ**

ವಿರೋಧಿ ಶಕ್ತಿಯೊಂದು ಎದುರಾದರೆ ಅದನ್ನು ಒಪ್ಪಿಕೊಳ್ಳಬೇಕಾಗಿಲ್ಲ, ಅದರ ಸೂಚನೆಗಳಿಗೆ ಸ್ವಾಗತ ನೀಡಬೇಕಾಗಿಲ್ಲ, ಶ್ರೀಮಾತೆಯವರೆಡೆ ಹೊರಳಿರಬೇಕು ಮತ್ತು ಅವರಿಂದ ಬೇರೆಡೆ ಹೊರಳುವುದನ್ನು ನಿರಾಕರಿಸಬೇಕು. ಮನುಷ್ಯ ಶ್ರೀಮಾತೆಯವರಿಗೆ ತನ್ನನ್ನು ತೆರೆದಿರಿಸಿಕೊಂಡಿರಲಿ ಇಲ್ಲವೆ ತೆರೆದಿರಿಸಿಕೊಂಡಿರದೇ ಇರಲಿ, ಅವನು ಸ್ವಾಮಿನಿಷ್ಠನಾಗಿರಬೇಕು, ಶ್ರದ್ಧಾವಂತನಾಗಿರಬೇಕು. ಸ್ವಾಮಿನಿಷ್ಠೆ ಮತ್ತು ತತ್ವನಿಷ್ಠೆ ಇವುಗಳಿಗಾಗಿ ಯೋಗ ಅವಶ್ಯವಾಗಿರುವುದಿಲ್ಲ, ಈ ಗುಣಗಳು

ಬಹಳ ಸರಳವಾದವುಗಳು, ದೈವೀ ಸತ್ಯಕ್ಕಾಗಿ ಅಭೀಪ್ಸೆ ಹೊಂದಿರುವ ಪುರುಷನಾಗಲಿ, ಸ್ತ್ರೀಯಾಗಲಿ ಅವುಗಳನ್ನು ಸಿದ್ಧಿಸಿಕೊಳ್ಳಲು ಶಕ್ತರಾಗಬೇಕು.

**CWSA, 32/160–61** **– ಶ್ರೀ ಅರವಿಂದರು**

*

**ಶ್ರೀಮಾತೆಯವರ ಹೆಸರಿಗೆ ಕರೆ ಕೊಡುವುದು**

ಭಾರತದಲ್ಲಿ ಗುರು ಶಿಷ್ಯನೊಬ್ಬನನ್ನು ಒಪ್ಪಿಕೊಂಡ ಕೂಡಲೆ ಅವನಿಗೆ ಒಂದು ಮಂತ್ರವನ್ನು ಕೊಡುತ್ತಾನೆ ಮತ್ತು ಅದರೊಂದಿಗೆ ಮುಂದೆ ಸಾಗಿ ಹೋಗೆಂದು ಅವನಿಗೆ ಹೇಳುತ್ತಾನೆ. ನಮ್ಮಲ್ಲಿ ಶ್ರೀಮಾತೆಯವರ ಹೆಸರಿನ ಹೊರತಾಗಿ ಬೇರೆ ಮಂತ್ರವಿಲ್ಲ. ಆದರೆ, ಸಾಮಾನ್ಯವಾಗಿ, ಕಾರ್ಯವೊಂದನ್ನು ಒಪ್ಪಿಸುತ್ತೇವೆ, ಅಭೀಪ್ಸೆ ಪಡುವುದನ್ನು, ನಿರಾಕರಿಸುವುದನ್ನು, ಶ್ರೀಮಾತೆಯವರಿಗೆ ತೆರೆದಿರಿಸಿ–ಕೊಂಡಿರುವುದನ್ನು ಕುರಿತು ಹೇಳುತ್ತೇವೆ.

**CWSA, 32/139** **– ಶ್ರೀ ಅರವಿಂದರು**

*

ನಿನಗೆ ನಿದ್ರೆಯಲ್ಲಾದ ಅನುಭವ ಪ್ರಾಣಿಕ ಜಗತ್ತಿನಲ್ಲಿ ಹೋಗುವುದಾಗಿತ್ತು ಮತ್ತು ಅಲ್ಲಿರುವ ವಿರೋಧೀ ಸತ್ತೆಗಳಲ್ಲಿ ಒಬ್ಬರನ್ನು ಭೇಟಿಮಾಡುವುದಿತ್ತು, ಅದು ನಿನ್ನನ್ನು ಬೆದರಿಸಲು ಹಾಗೂ ನಿನ್ನ ಮೇಲೆ ಆಕ್ರಮಣ ಮಾಡಲು ಬಯಸಿತ್ತು, ಆದರೆ ನೀನು ಶ್ರೀಮಾತೆಯವರಿಗೆ ಕರೆ ಕೊಟ್ಟದ್ದರಿಂದ ಅದು ನಿನ್ನ ಮೇಲೆ ಆಕ್ರಮಣ ಮಾಡಲು ಸಾಧ್ಯವಾಗಲಿಲ್ಲ. ಪ್ರಾಣಿಕ ಜಗತ್ತಿನ ಮೂಲಕ ಸಾಗಿ ಹೋಗುವಾಗ ನೆನಪಿಡಬೇಕಾದ ಎರಡು ಸಂಗತಿಗಳಿವೆ, – ಮೊದಲನೆಯದಾಗಿ ಶ್ರೀಮಾತೆಯವರ ರಕ್ಷಣೆಗಾಗಿ ಕರೆ ಕೊಡುವುದಾಗಿದೆ. ಎರಡನೆಯದಾಗಿ ಎಲ್ಲ ಭಯವನ್ನು ಚೆಲ್ಲಿಕೊಡಬೇಕು. ಭಯ ಪಟ್ಟುಕೊಳ್ಳದೆ ಇದ್ದವರಿಗೆ ಈ ಶಕ್ತಿಗಳು ಏನನ್ನೂ ಮಾಡಲಾರವು, ಅಂತಹವುಗಳೊಂದಿಗೆ ಯಾವುದೇ ಬಗೆಯ ಭೇಟಿಯಾದಾಗ ಇಲ್ಲವೆ ಸಂಘರ್ಷ ಉಂಟಾದಾಗ, ಸ್ವಲ್ಪಮಟ್ಟಿಗೆ ಭಯ ಉಂಟಾದರೂ ಶ್ರೀಮಾತೆಯವರ ಹೆಸರು ನಿಶ್ಚಿತವಾಗಿ ರಕ್ಷಣೆ ನೀಡುವುದು.

**CWSA, 32/289** **– ಶ್ರೀ ಅರವಿಂದರು**

*

## ಆ ಯೋಚನೆಯನ್ನು ಯಾವಾಗಲೂ ಕಾಪಾಡಿಕೊಂಡು ಬರಬೇಕು

ನಿಮ್ಮನ್ನು ಬೆದರಿಸಲು ಬರುವ ಈ ವಿಷಯಗಳನ್ನು ಚಿಕ್ಕ ಪ್ರಾಣಿಕ ಶಕ್ತಿಗಳು ನಿಮ್ಮ ಮೇಲೆ ಚೆಲ್ಲಿಕೊಟ್ಟಿರುತ್ತವೆ, ಅವು ಕೇವಲ ಪ್ರಭಾವಗಳಾಗಿದ್ದು (ನಿಮ್ಮಲ್ಲಿ ನರ ದೌರ್ಬಲ್ಯವನ್ನುಂಟು ಮಾಡಿ) ನೀವು ಸಾಧನೆ ಕೈಕೊಳ್ಳುವುದನ್ನು ತಡೆಹಿಡಿಯಲು ಬಯಸುತ್ತವೆ. ನೀವು ಎಲ್ಲ ಭಯವನ್ನು ನಿರಾಕರಿಸಿದಾಗ ಅವು ನಿಮಗೇನೂ ಮಾಡಲಾರವು. ಈ ವಿಷಯಗಳು ಎದುರಾದಾಗ "ಶ್ರೀಮಾತೆಯವರ ರಕ್ಷಣೆ ನನ್ನೊಂದಿಗಿದೆ, ಕೆಟ್ಟದ್ದೇನೂ ಸಂಭವಿಸುವುದು ಸಾಧ್ಯವಿಲ್ಲ" ಎಂಬ ವಿಚಾರವನ್ನು ಕಾಪಾಡಿಕೊಂಡು ಬರಬೇಕು; ಏಕೆಂದರೆ ಚೈತ್ಯಸತ್ತೆಯ ತೆರೆದಿರಿಸಿಕೊಳ್ಳುವಿಕೆ ಇದ್ದಾಗ ಮತ್ತು ಮನುಷ್ಯ ತನ್ನ ನಂಬಿಕೆಯನ್ನು ಶ್ರೀಮಾತೆಯವರಲ್ಲಿ ಇರಿಸಿದಾಗ, ಅದು ಈ ಎಲ್ಲ ವಿಷಯಗಳನ್ನು ದೂರ ಓಡಿಸುವುದಕ್ಕೆ ಸಾಕಷ್ಟಾಗುತ್ತದೆ. ಸಾಧಕರಲ್ಲಿಯೇ ಹಲವರು ಭಯ ತರಿಸುವ ಕನಸುಗಳನ್ನು ಕಾಣುತ್ತಿದ್ದಾಗ ಆ ಕನಸಿನಲ್ಲಿಯೇ ಶ್ರೀಮಾತೆಯವರ ಹೆಸರಿಗೆ ಕರೆ ಕೊಡುವುದನ್ನು ಕಲಿತುಕೊಳ್ಳುತ್ತಾರೆ, ಆಗ ಅವರನ್ನು ಬೆದರಿಸುವ ವಿಷಯಗಳು ಅಸಹಾಯಕವಾಗುತ್ತವೆ ಮತ್ತು ನಿಂತುಹೋಗುತ್ತವೆ. ಆದ್ದರಿಂದ ನೀವು ಭಯಪಟ್ಟುಕೊಳ್ಳುವುದನ್ನು ನಿರಾಕರಿಸಬೇಕು ಮತ್ತು ಈ ಪ್ರಭಾವಗಳನ್ನು ಜುಗುಪ್ಸೆಯಿಂದ ತಿರಸ್ಕರಿಸಬೇಕು. ಭಯ ತರಿಸುವಂತಹದು ಏನೇ ಇದ್ದರೂ ಶ್ರೀಮಾತೆಯವರ ರಕ್ಷಣೆ ಕೆಳಗಿಳಿದು ಬರಲು ಕರೆ ಕೊಡಬೇಕು.

**CWSA, 32/306–07** **– ಶ್ರೀ ಅರವಿಂದರು**

*

## ಶ್ರೀಮಾತೆಯವರ ದೈವೀ ಕೃಪೆಯಲ್ಲಿ ವಿಶ್ವಾಸ

ಪ್ರತಿಯೊಂದು ಹೆಜ್ಜೆಯಲ್ಲಿ ದೈವೀ ಕೃಪೆಯಲ್ಲಿ ವಿಶ್ವಾಸವಿರಿಸುವುದು, ಯೋಚನೆಯನ್ನು ಸತತ ಶ್ರೀಮಾತೆಯವರತ್ತ ನಿರ್ದೇಶಿಸುವುದು ಮತ್ತು ಸತ್ತೆ ತೆರೆದುಕೊಳ್ಳುವವರೆಗೆ ಹಾಗೂ ಆಧಾರದಲ್ಲಿ ಶ್ರೀಮಾತೆಯವರ ಶಕ್ತಿ ಕಾರ್ಯ ಮಾಡುತ್ತಿರುವುದರ ಬಗ್ಗೆ ಭಾವನೆ ಬರುವವರೆಗೆ ತನ್ನನ್ನು ಅರ್ಪಿಸಿಕೊಳ್ಳುವುದು ಇವು ಯೋಗದಲ್ಲಿ ಪ್ರಧಾನ ವಿಷಯಗಳಾಗಿರುತ್ತವೆ.

*

**ಪ್ರಶ್ನೆ :** *ಶ್ರೀಮಾತೆಯವರ ದೈವೀ ಕೃಪೆ ಕಾರ್ಯ ಕೈಕೊಳ್ಳುವುದಕ್ಕೆ ನಿಯಮ–ವೊಂದೇನಾದರೂ ಇದೆಯೆ?*

**ಶ್ರೀ ಅ :** ಮನುಷ್ಯ ತನ್ನ ಚೈತ್ಯಸತ್ತೆಯನ್ನು ಹೆಚ್ಚಾಗಿ ಅಭಿವೃದ್ಧಿಪಡಿಸಿಕೊಂಡಾಗ, ದೈವೀ ಕೃಪೆಗೆ ಹೆಚ್ಚಿನ ರೀತಿಯಲ್ಲಿ ಕಾರ್ಯಕೈಕೊಳ್ಳಲು ಸಾಧ್ಯವಾಗುತ್ತದೆ.

*

**ಪ್ರಶ್ನೆ :** *ಶ್ರೀಮಾತೆಯವರ ದೈವೀ ಕೃಪೆ ಸರ್ವಸಾಮಾನ್ಯವಾಗಿರುತ್ತದೆಯೆ?*

**ಶ್ರೀ ಅ :** ಸರ್ವಸಾಮಾನ್ಯವಾಗಿ ಹಾಗೂ ವಿಶೇಷ ರೀತಿಯಲ್ಲಿ ಇರುತ್ತದೆ.

*

**ಪ್ರಶ್ನೆ :** *ಶ್ರೀಮಾತೆಯವರು ಸರ್ವಸಾಮಾನ್ಯ ರೀತಿಯಲ್ಲಿ ಕೊಡುವುದನ್ನು ಸ್ವೀಕರಿಸುವುದು ಹೇಗೆ?*

**ಶ್ರೀ ಅ :** ನೀವು ಕೇವಲ ನಿಮ್ಮನ್ನು ತೆರೆದಿರಿಸಿಕೊಂಡಿರಬೇಕು ಮತ್ತು ನಿಮಗೆ ಅವಶ್ಯವಾದದ್ದು ಮತ್ತು ಆ ಕ್ಷಣದಲ್ಲಿ ನೀವು ಸ್ವೀಕರಿಸಲು ಸಾಧ್ಯವಾಗುವಂತಹದು ಬರುವುದು.

**CWSA, 32/166** **– ಶ್ರೀ ಅರವಿಂದರು**

*

ಜನರಿಗೆ ತೊಂದರೆಗಳಿವೆ ಎಂಬ ಕಾರಣದಿಂದ ಶ್ರೀಮಾತೆಯವರು ಅಸಂತುಷ್ಟರಾಗುವುದಿಲ್ಲ. ತಮ್ಮ ಸಹಾಯವನ್ನು ಹಾಗೂ ಆಧಾರವನ್ನು ಹೆಚ್ಚಿನ ರೀತಿಯಲ್ಲಿ ನೀಡುವುದಕ್ಕೆ ತೊಂದರೆ ಒಂದು ಕಾರಣವಾಗುತ್ತದೆ. ನೀನು ಹೇಳುತ್ತಿರುವ ಈ ವಿಚಾರಗಳೆಲ್ಲ ನಿನ್ನ ಮೇಲಿರುವ ವಿರೋಧೀ ಒತ್ತಡದಿಂದ ಹುಟ್ಟಿಬಂದ ಸೂಚನೆಗಳಾಗಿರುತ್ತವೆ. ನೀನು ಯಾವಾಗಲೂ ಶ್ರೀಮಾತೆಯವರ ದೈವೀ ಕೃಪೆಯನ್ನು ನೆಚ್ಚಿಕೊಂಡಿರಬಹುದು, ನಾವು ನಿನ್ನನ್ನು ಚೆಲ್ಲಿಕೊಡುವುದಿಲ್ಲ – ನಮ್ಮ ಆಧಾರ ಯಾವಾಗಲೂ ನಿನ್ನ ಜೊತೆಗಿರುತ್ತದೆ ಎಂಬುದರ ಬಗ್ಗೆ ನೀನು ಪರಿಪೂರ್ಣ ನಂಬಿಕೆ ಹೊಂದಿರಬಹುದಾಗಿದೆ.

**CWSA, 32/544** **– ಶ್ರೀ ಅರವಿಂದರು**

*



To express Harmony
of all things
Simplicity
is the best.


Peace, the Light and
the Joy of the Lord
to be always with you



ಪರಮೋಚ್ಚ ಪ್ರಭುವಿನ ಹಾಗೂ ಶ್ರೀಮಾತೆಯವರ ಕಣ್ಣುಗಳ ಎದುರಿನಲ್ಲಿಯೇ ನೀವಿದ್ದೀರಿ ಎನ್ನುವ ರೀತಿಯಲ್ಲಿ ಯಾವಾಗಲೂ ಜೀವಿಸಬೇಕು. ಆ ದೈವೀ ಸಾನ್ನಿಧ್ಯಕ್ಕೆ ಯೋಗ್ಯವಲ್ಲದ ಏನನ್ನೂ ಕೈಕೊಳ್ಳುವುದು ಬೇಡ, ಏನನ್ನೂ ಪ್ರಯತ್ನಪಟ್ಟು ಯೋಚಿಸುವುದು ಬೇಡ, ಭಾವನೆಗೆ ತಂದುಕೊಳ್ಳುವುದು ಬೇಡ.

*

ಸ್ವಾರ್ಥಪರತೆ ಬಹಳಷ್ಟು ಕುಗ್ಗಿ ಹೋದಾಗ, ಮತ್ತು ಶ್ರೀಮಾತೆಯವರನ್ನು ಕುರಿತು ಬಲವತ್ತರವಾದ ಭಕ್ತಿ ಇದ್ದಾಗ ಚೈತ್ಯಸತ್ತೆಯ ಕೇಂದ್ರ ನೇರವಾಗಿ ತೆರೆದುಕೊಳ್ಳುವುದು ಸುಲಭವಾಗುತ್ತದೆ. ಆಧ್ಯಾತ್ಮಿಕ ವಿನಮ್ರತೆ, ಅಧೀನಕ್ಕೊಳಗಾಗುವ ಭಾವ, ಅವಲಂಬನೆ ಇದೆಲ್ಲ ಅವಶ್ಯವಾಗಿರುತ್ತದೆ.

*

ಸತತ ಜ್ಞಾಪಿಸಿಕೊಳ್ಳುವುದರ ಮೂಲಕ ಸತ್ತೆ ಪೂರ್ತಿ ತೆರೆದಿರಿಸಿಕೊಳ್ಳುವುದನ್ನು ತಯಾರು ಮಾಡಲಾಗುತ್ತದೆ. ಹೃದಯವನ್ನು ತೆರೆದಿರಿಸಿಕೊಳ್ಳುವುದರ ಮೂಲಕ ಶ್ರೀಮಾತೆಯವರ ಸಾನ್ನಿಧ್ಯ ಭಾವನೆಗೆ ಬರುವುದು ಪ್ರಾರಂಭವಾಗುತ್ತದೆ, ಮತ್ತು ಮೇಲ್ಗಡೆಗಿರುವ ದೈವೀ ಸಾಮರ್ಥ್ಯಕ್ಕೆ ತೆರೆದುಕೊಳ್ಳುವುದರ ಮೂಲಕ ಉಚ್ಚತರ

ಪ್ರಜ್ಞೆಯ ದೈವೀ ಶಕ್ತಿ ದೇಹದಲ್ಲಿ ಕೆಳಗಿಳಿದು ಬರುತ್ತದೆ ಮತ್ತು ಇಡೀ ಸ್ವಭಾವವನ್ನು ಬದಲು ಮಾಡಲು ಅಲ್ಲಿ ಕಾರ್ಯ ಕೈಕೊಳ್ಳುತ್ತದೆ.

**CWSA, 32/172, 163, 167** **– ಶ್ರೀ ಅರವಿಂದರು**

*

## ಶ್ರೀಮಾತೆಯವರನ್ನು ಕುರಿತು ಚೈತ್ಯದ ಭಾವನೆ

**ಚೈತ್ಯ ಹೊರಹೊಮ್ಮಿ ಬಂದುದರ ಕುರುಹುಗಳು**

**ಪ್ರಶ್ನೆ :** *ಶ್ರೀಮಾತೆಯವರನ್ನು ನೋಡಿದಾಗ ಕೇವಲ ಆನಂದ ಮತ್ತು ತೃಪ್ತಿ ಇವುಗಳನ್ನು ದೊರಕಿಸುವ ಭಾವನೆ ಯಾವುದರದ್ದಾಗಿರುತ್ತದೆ?*

**ಶ್ರೀ ಅ :** ಅದು ಚೈತ್ಯದ್ದು.

**ಪ್ರಶ್ನೆ :** *ಶ್ರೀಮಾತೆಯವರನ್ನು ನೆನಪಿಸಿಕೊಂಡಾಗ ಕೇವಲ ಆನಂದ ಮತ್ತು ತೃಪ್ತಿ ಇವುಗಳನ್ನು ದೊರಕಿಸುವ ಭಾವನೆ ಯಾವುದರದ್ದಾಗಿರುತ್ತದೆ?*

**ಶ್ರೀ ಅ :** ಚೈತ್ಯದ್ದು.

**ಪ್ರಶ್ನೆ :** *ಶ್ರೀಮಾತೆಯವರ ವಿರುದ್ಧ ಹೇಳಿದ್ದನ್ನು ಕೇಳಿದಾಗ ಹೃದಯದಲ್ಲಿ ಗಾಯವನ್ನುಂಟು ಮಾಡುವ ಭಾವನೆ ಯಾವುದರದ್ದಾಗಿರುತ್ತದೆ?*

**ಶ್ರೀ ಅ :** ಚೈತ್ಯದ್ದು.

**ಪ್ರಶ್ನೆ :** *ಶ್ರೀಮಾತೆಯವರಿಂದ ಭೌತಿಕವಾಗಿ ದೂರ ಇದ್ದಾಗಲೂ ಕೂಡ ಮನುಷ್ಯ ತನ್ನ ಹೃದಯದಲ್ಲಿ ಅವರ ಸಾನ್ನಿಧ್ಯವಿರುವ ಭಾವನೆಯನ್ನು ಯಾವುದು ತಂದುಕೊಡುತ್ತದೆ?*

**ಶ್ರೀ ಅ :** ಚೈತ್ಯ.

**ಪ್ರಶ್ನೆ :** *ಪ್ರೇಮದ ಪೂರ್ತಿ ಸ್ಥಿತಿಯಲ್ಲಿ ನಾನಿರುವೆ ಎಂಬ ತೀರ್ಮಾನಕ್ಕೆ ಬರುವುದು ಹೇಗೆ?*

**ಶ್ರೀ ಅ :** ಅಹಂಕಾರ ರಹಿತತೆ, ಪರಿಶುದ್ಧ ಭಕ್ತಿ, ಭಗವಂತನ ಅಧೀನಕ್ಕೊಳ–ಗಾಗುವುದು, ಸಮರ್ಪಣ ಮಾಡಿಕೊಳ್ಳುವುದು ಇವೆಲ್ಲವುಗಳ ಮೂಲಕ ತೀರ್ಮಾನಕ್ಕೆ ಬರಬಹುದು.

**ಪ್ರಶ್ನೆ :** *ದೈವತ್ವಕ್ಕಾಗಿ ಆಂತರಿಕ ಪ್ರೇಮ ಜಿಗಿದು ಮೇಲೆ ಬಂದಾಗ ಅದರ ಜೊತೆಗೆ ಕಣ್ಣೀರು ಬರುವುದನ್ನು ನಾನು ಅನೇಕ ಸಲ ಗುರುತಿಸಿದ್ದೇನೆ.*

**ಶ್ರೀ ಅ :** ಭಕ್ತಿ ಇತ್ಯಾದಿಗಳಿಂದ ಪ್ರೇರಿತವಾದ ಚೈತ್ಯದ ಕಣ್ಣೀರುಗಳು.

*

**ಭಗವಂತನಿಗಾಗಿ ಚೈತ್ಯಾತ್ಮಿಕ ಪ್ರೇಮ**

**ಪ್ರಶ್ನೆ :** *ಶ್ರೀಮಾತೆಯವರಿಗಾಗಿ ಪರಿಶುದ್ಧ ಭಕ್ತಿಯನ್ನು ಹೊಂದುವುದು ಹೇಗೆ?*

**ಶ್ರೀ ಅ :** ಪರಿಶುದ್ಧ ಪೂಜೆ, ಆರಾಧನೆ, ಯಾವ ಹಕ್ಕು ಸಾಧಿಸದೆ, ಒತ್ತಾಯದಿಂದ ಏನನ್ನೂ ಬೇಡದೆ ಭಗವಂತನಿಗಾಗಿ ಪ್ರೇಮ ಹೀಗೆ ಇರುವುದೆಲ್ಲವನ್ನು ಶುದ್ಧ ಭಕ್ತಿ ಎಂದು ಕರೆಯಲಾಗುತ್ತದೆ.

*

**ಪ್ರಶ್ನೆ :** *ಎಲ್ಲವೂ ಸ್ಥಿರವಾಗಿದ್ದಾಗ, ಅಚಂಚಲವಾಗಿದ್ದಾಗ, ನನ್ನ ಹೃದಯದಲ್ಲಿ ಆಳವೊಂದಿರುವುದರ ಭಾವನೆ ನನಗೆ ಬರುತ್ತದೆ, ಎಲ್ಲರಿಗೂ ಸಮನಾಗಿರುವ ರೀತಿಯಲ್ಲಿ ಮಧುರ ಭಾವನೆ ಸತತ ಹೊರಹೊಮ್ಮಿ ಬರುತ್ತದೆ, ಅದು ಶ್ರೀಮಾತೆಯವರತ್ತ ಸತತ ಮೇಲಕ್ಕೇರಿ ಹೋಗುತ್ತದೆ. ಭಗವಂತನೊಡನೆ ಮಧುರ ಸಂಬಂಧವಿರುವುದರ ಭಾವನೆ ಇರುತ್ತದೆ. ಅದು ಎಲ್ಲ ಸತ್ತೆಯನ್ನು ಮೃದುವಾಗಿರಿಸುತ್ತದೆ – ಅದು ಸ್ಥಿರವಾಗಿದೆ, ಅಚಂಚಲವಾಗಿದೆ, ಮಧುರ ಶಾಂತಿ ಮತ್ತು ತೃಪ್ತಿ ಇವುಗಳೊಂದಿಗೆ ತುಂಬಿಕೊಂಡಿದೆ.*

**ಶ್ರೀ ಅ :** ಅದು ಚೈತ್ಯಾತ್ಮಿಕ ಪ್ರೇಮ.

*

ಭಗವಂತನಿಗಾಗಿ ಇಲ್ಲವೆ ಭಗವಂತನಿಗಾಗಿ ಇರುವ ಭಕ್ತಿಗಾಗಿ ಹೊಂದಿರುವ ಆಸೆ ಉಳಿದೆಲ್ಲ ಆಸೆಗಳಿಂದ ಮನುಷ್ಯನನ್ನು ಮುಕ್ತಮಾಡುತ್ತದೆ – ತಿರುಳಿನಲ್ಲಿ ಅದು ಆಸೆಯಲ್ಲ, ಆದರೆ ಅಭೀಪ್ಸೆಯಾಗಿರುತ್ತದೆ, ಆತ್ಮದ ಆವಶ್ಯಕತೆಯಾಗಿರುತ್ತದೆ, ಆಳಾತಿ ಆಳದಲ್ಲಿರುವ ಆಂತರಿಕ ಸತ್ತೆಯ ಅಸ್ತಿತ್ವದ ಉಸಿರಾಗಿರುತ್ತದೆ, ಅದು ಹಾಗಿರುವುದರಿಂದ ಅದನ್ನು ಆಸೆಗಳ ಮಧ್ಯದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗದು.

**CWSA, 32/466, 68, 67, 476** **– ಶ್ರೀ ಅರವಿಂದರು**

*

**ಪ್ರಶ್ನೆ :** *ನನಗೆ ಏಕಾಗ್ರತೆಯಲ್ಲಿರಲು ಇಲ್ಲವೆ ಧ್ಯಾನ ಮಾಡಲು ಸಾಧ್ಯವಾಗದೆ ಹೋದಾಗ ನಾನು ಶ್ರೀಮಾತೆಯವರ ಮಡಿಲಲ್ಲಿ ಶಾಶ್ವತವಾಗಿ ಉಳಿದುಕೊಂಡಿರುವೆ ಮತ್ತು ಅವರು ನನ್ನನ್ನು ಹೊರಗೆ ಕಳಿಸಿಕೊಟ್ಟಾಗ ಹೊರಗೆ ಹೋಗುವೆ ಎಂದು ನಾನು ಸರಳವಾಗಿ ಕಲ್ಪನೆ ಮಾಡಿಕೊಳ್ಳುತ್ತೇನೆ.*

**ಶ್ರೀ ಅ :** ಇದು ಸಾಧ್ಯವಾಗಬಹುದಾದ ಅತ್ಯಂತ ಒಳ್ಳೆಯ ರೀತಿಯ ಏಕಾಗ್ರತೆ.

**CWSA, 32/147** **– ಶ್ರೀ ಅರವಿಂದರು**

*

## ಶರಣಾಗತಿ

**ಆತ್ಮ ಶರಣಾಗಲು ಆತುರದಿಂದಿದೆ, ಶರಣಾಗತಿಯಿಂದ ಅದಕ್ಕೆ ಸಂತೋಷವಾಗುತ್ತದೆ**

ನಿಮ್ಮ ಶರಣಾಗತಿಯನ್ನು ಹಿಂದೆ ಹಿಡಿದಿಟ್ಟುಕೊಂಡರೆ ಶ್ರೀಮಾತೆಯವರಿಗೆ ನಿಮ್ಮನ್ನು ತೆರೆದಿರಿಸಿಕೊಂಡಿರುವುದಕ್ಕೆ ಬಹಳಷ್ಟು ಆಧ್ಯಾತ್ಮಿಕ ಅರ್ಥವಿರುವುದಿಲ್ಲ. ಸ್ವ–ಅರ್ಪಣೆ ಇಲ್ಲವೆ ಶರಣಾಗತಿಯನ್ನು ಈ ಯೋಗಾಚರಣೆ ಮಾಡುವವರಿಂದ ಒತ್ತಾಯಪೂರ್ವಕ ಬೇಡಲಾಗಿರುತ್ತದೆ. ಏಕೆಂದರೆ ಸತ್ತೆಯ ಇಂತಹ ಪ್ರಗತಿಪರ ಶರಣಾಗತಿ ಇಲ್ಲದೆ ಗುರಿಯ ಸಮೀಪದಲ್ಲಿ ಎಲ್ಲಿಯಾದರೂ ಸಾಗಿ ಹೋಗುವುದು ಅಸಾಧ್ಯವಾಗುತ್ತದೆ. ತೆರೆದಿರಿಸಿಕೊಳ್ಳುವುದರ ಅರ್ಥ ದೈವೀ ಶಕ್ತಿಗೆ ನಿಮ್ಮಲ್ಲಿ ಕಾರ್ಯ ಕೈಕೊಳ್ಳಲು ಕರೆ ಕೊಡುವುದಾಗಿರುತ್ತದೆ ಮತ್ತು ನೀವು ಅದಕ್ಕೆ ಶರಣಾಗತರಾಗದೆ ಹೋದರೆ ಅದರರ್ಥ ದೈವೀ ಶಕ್ತಿಗೆ ನಿಮ್ಮಲ್ಲಿ ಕಾರ್ಯ ಮಾಡಲು ಎಳ್ಳಷ್ಟೂ ಅನುವು ಮಾಡಿಕೊಡಲಾಗುವುದಿಲ್ಲ ಎಂದಾಗುತ್ತದೆ, ಇಲ್ಲವೆ ಅದು ನೀವು ಇರಿಸುವ ಷರತ್ತಿನ ಪ್ರಕಾರ ನಿಮಗೆ ಬೇಕಾದ ರೀತಿಯಲ್ಲಿ ಕಾರ್ಯ ಮಾಡಬೇಕು ಎಂದಾಗುತ್ತದೆ, ದೈವೀ ಸತ್ಯಕ್ಕನುಗುಣವಾದ ಅದರದೇ ರೀತಿಯಲ್ಲಿ ಅದನ್ನು ಮಾಡಬೇಕು ಎಂದಾಗುವುದಿಲ್ಲ. ಈ ಬಗೆಯ ಸೂಚನೆಯನ್ನು, ಸಾಮಾನ್ಯವಾಗಿ, ಯಾವುದೋ ವಿರೋಧೀ ಶಕ್ತಿ ಇಲ್ಲವೆ ಮನಸ್ಸಿನ ಇಲ್ಲವೆ ಪ್ರಾಣಿಕದ ಅಹಂಮನ್ಯತೆಯ ಅಂಶ ಕೊಟ್ಟಿರುತ್ತದೆ, ಅದಕ್ಕೆ ದೈವೀ ಕೃಪೆ ಇಲ್ಲವೆ ದೈವೀ ಶಕ್ತಿ ಬೇಕಾಗಿರುತ್ತದೆ, ಆದರೆ ಅದು ಕೇವಲ ತನ್ನದೇ ಉದ್ದೇಶಕ್ಕಾಗಿ ಉಪಯೋಗ ಮಾಡುವುದಕ್ಕಿರುತ್ತದೆ, ದೈವೀ ಉದ್ದೇಶಕ್ಕಾಗಿ ಜೀವಿಸಲು ಇಷ್ಟಪಡುವುದಿಲ್ಲ. – ಅದು ಭಗವಂತನಿಂದ ತನಗೆ ಸಾಧ್ಯವಿದ್ದಷ್ಟನ್ನು

ತೆಗೆದುಕೊಳ್ಳಲು ಇಷ್ಟಪಡುತ್ತದೆ, ಆದರೆ ಅದು ಭಗವಂತನಿಗೆ ತನ್ನನ್ನು ಕೊಟ್ಟುಕೊಳ್ಳುವುದಿಲ್ಲ. ನಿಜವಾದ ಸತ್ತೆಯಾದ ಆತ್ಮ ತದ್ವಿರುದ್ಧವಾಗಿ ಭಗವಂತನೆಡೆಗೆ ಹೊರಳುತ್ತದೆ ಮತ್ತು ಶರಣಾಗತವಾಗುವುದಕ್ಕೆ ಕೇವಲ ಇಷ್ಟಪಡುತ್ತದೆ ಅಷ್ಟೇ ಅಲ್ಲ, ಆದರೆ ಅದಕ್ಕಾಗಿ ಆತುರದಿಂದಿರುತ್ತದೆ, ಅದರಿಂದ ಸಂತೋಷ ಪಡೆಯುತ್ತದೆ.

**CWSA, 32/140–41** **– ಶ್ರೀ ಅರವಿಂದರು**

*

**ಶ್ರೀಮಾತೆಯವರಿಗೆ ಅಧೀನಗೊಳಿಸಿಕೊಳ್ಳುವಿಕೆಯ ಆವಶ್ಯಕತೆ ಇದೆ**

ನಿನ್ನ ಸಾಧನೆಯಲ್ಲಿ ಪ್ರಗತಿ ಸಾಧಿಸಬೇಕಾದರೆ ನೀನು ಹೇಳುತ್ತಿರುವ ಅಧೀನಗೊಳಿಸಿಕೊಳ್ಳುವಿಕೆ ಮತ್ತು ಶರಣಾಗತಿ ಇವು ನಿಷ್ಕಪಟವಾದವುಗಳು, ನಿಜವಾದವುಗಳು ಮತ್ತು ಸಂಪೂರ್ಣವಾದವುಗಳು ಆಗುವಂತೆ ಮಾಡುವ ಆವಶ್ಯಕತೆ ಇದೆ. ಆಧ್ಯಾತ್ಮಿಕ ಅಭೀಪ್ಸೆಯೊಂದಿಗೆ ನಿನ್ನ ಆಶೆಗಳನ್ನು ಮಿಶ್ರಣ ಮಾಡುತ್ತಿರುವವರೆಗೆ ಇದು ಸಾಧ್ಯವಾಗದು. ನಿನ್ನ ಕುಟುಂಬ, ಮಗು ಇಲ್ಲವೆ ಯಾವುದೇ ವಿಷಯ, ಯಾವುದೇ ವ್ಯಕ್ತಿ ಇವರನ್ನು ಕುರಿತು ಪ್ರಾಣಿಕ ಆಸಕ್ತಿಯನ್ನು ಪೋಷಿಸಿಕೊಂಡು ಬರುತ್ತಿರುವವರೆಗೆ ಅದು ಸಾಧ್ಯವಾಗದು. ಈ ಯೋಗವನ್ನು ನೀವು ಕೈಕೊಳ್ಳಬೇಕಾದರೆ ನಿಮ್ಮಲ್ಲಿ ಒಂದೇ ಆಸೆ, ಅಭೀಪ್ಸೆ ಇರಬೇಕು, ಅದು ದೈವೀ ಸತ್ಯವನ್ನು ಸ್ವೀಕರಿಸುವುದಕ್ಕಾಗಿ ಮತ್ತು ಅದನ್ನು ನಿಮ್ಮ ಎಲ್ಲ ಯೋಚನೆಗಳು, ಭಾವನೆಗಳು, ಕ್ರಿಯೆಗಳು ಮತ್ತು ಸ್ವಭಾವ ಇವುಗಳಲ್ಲಿ ಪ್ರಕಟಿಸುವುದಕ್ಕಾಗಿ ಇರಬೇಕು. ನೀವು ಯಾರೊಡನೆಯೂ ಯಾವುದೇ ಬಗೆಯ ಸಂಬಂಧಗಳನ್ನು ಹೊಂದಲು ಹಾತೊರೆಯಬಾರದು. ಸಾಧಕನಲ್ಲಿ ನಿಜವಾದ ಪ್ರಜ್ಞೆ ಇದ್ದಾಗ, ಮತ್ತು ದೈವೀ ಪ್ರಕಾಶದಲ್ಲಿ ಜೀವಿಸುತ್ತಿದ್ದಾಗ ಅವನು ಇತರರೊಡನೆ ಹೊಂದಬಹುದಾದ ಸಂಬಂಧಗಳನ್ನು ಅಂತರಂಗದಿಂದ ಸೃಷ್ಟಿಸಬೇಕು. ಆ ಸಂಬಂಧಗಳನ್ನು, ಅತಿಮಾನಸ ಸತ್ಯಕ್ಕನುಗುಣವಾಗಿ, ಶ್ರೀಮಾತೆಯವರ ಸಾಮರ್ಥ್ಯ ಮತ್ತು ಸಂಕಲ್ಪಗಳ ಪ್ರಕಾರ ಅಂತರಂಗದಲ್ಲಿ ನಿರ್ಧರಿಸಲಾಗುವುದು, ಅದು ಸಾಧಕನ ಮನಸ್ಸು ಮತ್ತು ಪ್ರಾಣಿಕ ಆಸೆಗಳಿಂದ ನಿರ್ಧಾರಕ್ಕೊಳಗಾಗಬಾರದು. ಈ ವಿಷಯವನ್ನೇ ನೀನು ನೆನಪಿನಲ್ಲಿಟ್ಟುಕೊಳ್ಳಬೇಕು.

*

ಭಗವಂತ ಮುನ್ನಡೆಸಿಕೊಂಡು ಹೋಗಬಲ್ಲ, ಅವನು ಮುಂದೆ ನೂಕುವುದಿಲ್ಲ. ಮನುಷ್ಯನೆಂದು ಕರೆಯಲಾದ ಪ್ರತಿಯೊಬ್ಬ ಮಾನಸಿಕ ಸತ್ತೆಗೆ ದೈವಿಕವಾಗಿ ಮುನ್ನಡೆಸಿಕೊಂಡು ಹೋಗುವುದನ್ನು ಒಪ್ಪಿಕೊಳ್ಳಲು ಇಲ್ಲವೆ ಒಪ್ಪಿಕೊಳ್ಳದೆ ಇರಲು ಆಂತರಿಕ ಸ್ವಾತಂತ್ರ್ಯವಿರುತ್ತದೆ. – ಇನ್ನಾವ ಬೇರೆ ರೀತಿಯಲ್ಲಿ ನಿಜವಾದ ಆಧ್ಯಾತ್ಮಿಕ ಉತ್ಕ್ರಾಂತಿಯನ್ನು ಕೈಕೊಳ್ಳಲಾದೀತು?

**CWSA, 32/141–42, 144–45** **– ಶ್ರೀ ಅರವಿಂದರು**

*

**ಶ್ರೀಮಾತೆಯವರತ್ತ ನೋಡಿರಿ**

ಶರಣಾಗತಿ ಎಂದರೆ ಕೇವಲ ಶ್ರೀಮಾತೆಯವರತ್ತ ನೋಡುವುದಾಗಿದೆ. – ಎಲ್ಲ ಆಸೆಗಳನ್ನು ತಿರಸ್ಕರಿಸುವುದಾಗಿದೆ, ಕೇವಲ ಅವರ ಸಂಕಲ್ಪದ ಪ್ರಕಾರ ಕಾರ್ಯ ಮಾಡುವುದಾಗಿದೆ, ಮನುಷ್ಯ ತನ್ನದೇ ವಿಚಾರಗಳು ಹಾಗೂ ಆದ್ಯತೆಗಳು ಇವುಗಳಿಗೆ ಒತ್ತು ನೀಡದೆ ಇರುವುದಾಗಿದೆ, ಅವರ ಮಾರ್ಗದರ್ಶನವನ್ನು ಅನುಸರಿಸುವುದಾಗಿದೆ, ಅದಕ್ಕೆ ವಿಧೇಯವಾಗಿರುವುದಾಗಿದೆ, ಮನುಷ್ಯ ತನ್ನನ್ನು ತೆರೆದಿರಿಸಿಕೊಂಡು ಅವರ ದೈವೀ ಶಕ್ತಿ ಹಾಗೂ ಅದರ ಕಾರ್ಯಗತಿಗಳ ಬಗ್ಗೆ ಅರಿವುಳ್ಳವನಾಗುವುದಾಗಿದೆ ಮತ್ತು ಆ ಕಾರ್ಯಗತಿಗಳು ಸ್ವಭಾವವನ್ನು ದೈವೀ ಸ್ವಭಾವವನ್ನಾಗಿ ಬದಲಿಸಲು ಅನುವು ಮಾಡಿಕೊಡುವುದಾಗಿದೆ.

**CWSA, 32/146** **– ಶ್ರೀ ಅರವಿಂದರು**

*

**ಶರಣಾಗತವಾಗುವುದರಲ್ಲಿ ಇರುವ ತೊಂದರೆ**

ಮಾನವನ ಪ್ರಾಣಿಕ ಇನ್ನೊಬ್ಬರ ನಿಯಂತ್ರಣ ಇಲ್ಲವೆ ಪ್ರಾಬಲ್ಯ ಇವುಗಳಿಗೆ ಒಳಗಾಗುವುದನ್ನು ಇಷ್ಟಪಡುವುದಿಲ್ಲ ಎಂದು ಹೇಳಿದ್ದೆ ಮತ್ತು ಆ ಕಾರಣದಿಂದಾಗಿಯೇ ಸಾಧಕರು ಶ್ರೀಮಾತೆಯವರಿಗೆ ಶರಣಾಗುವುದು ಕಠಿಣ ಎಂದು ಕಂಡುಕೊಂಡಿದ್ದರೆಂದು ಕೂಡ ಹೇಳಿದ್ದೆ. ಏಕೆಂದರೆ ಪ್ರಾಣಿಕ ತನ್ನದೇ ವಿಚಾರಗಳು, ಪ್ರಚೋದನೆಗಳು, ಆಸೆಗಳು, ಆದ್ಯತೆಗಳು ಇವುಗಳನ್ನೆಲ್ಲ ದೃಢೀಕರಸಿಲು, ತನಗೆ ಬೇಕಾದುದನ್ನು ಕೈಕೊಳ್ಳಲು ಬಯಸುತ್ತದೆ, ಮುನ್ನಡೆಸುವ ಇಲ್ಲವೆ ಮುಂದೂಡಿಕೊಂಡು ಹೋಗುವ ತನ್ನದೇ ಸ್ವಭಾವದ ಹೊರತಾಗಿ ಬೇರೆ ಶಕ್ತಿಯನ್ನು ಭಾವನೆಗೆ ತಂದುಕೊಳ್ಳುವುದನ್ನು ಇಷ್ಟಪಡುವುದಿಲ್ಲ; ಆದರೆ

ಶ್ರೀಮಾತೆಯವರಿಗೆ ಶರಣಾಗುವುದರ ಅರ್ಥ ಅದು ಈ ಎಲ್ಲ ವೈಯಕ್ತಿಕ ವಿಷಯಗಳನ್ನು ಕೈಬಿಡಬೇಕು ಮತ್ತು ಮಾರ್ಗದರ್ಶನ ಮಾಡಲು ಹಾಗೂ ಆ ಪ್ರಾಣಿಕದೇ ಆಗಿರದ ರೀತಿಗಳಲ್ಲಿ ಉಚ್ಚತರ ದೈವೀ ಸತ್ಯದತ್ತ ಮನ್ನೂಕಲು ಅವರ ದೈವೀ ಶಕ್ತಿಗೆ ಅನುವು ಮಾಡಿಕೊಡಬೇಕು: ಹಾಗಾಗಿ ಅದು ವಿರೋಧಿಸುತ್ತದೆ, ದೈವೀ ಸತ್ಯ, ದೈವೀ ಪ್ರಕಾಶ ಹಾಗೂ ಶ್ರೀಮಾತೆಯವರ ಶಕ್ತಿ ಇವುಗಳ ಪ್ರಾಬಲ್ಯಕ್ಕೆ ಒಳಗಾಗುವುದನ್ನು ಬಯಸುವುದಿಲ್ಲ, ತನ್ನದೇ ಸ್ವಾತಂತ್ರ್ಯದ ಮೇಲೆ ಒತ್ತುಕೊಡುತ್ತದೆ ಮತ್ತು ಶರಣಾಗತವಾಗಲು ನಿರಾಕರಿಸುತ್ತದೆ.

**CWSA, 32/147–48** **– ಶ್ರೀ ಅರವಿಂದರು**

*

**ನೀವು ಕೈಕೊಳ್ಳಲಿ ಎಂದು ನಾನು ಬಯಸುವುದೇನು?**

ನೀವು ಕೈಕೊಳ್ಳಲಿ ಎಂದು ನಾನು ಬಯಸಿದ್ದು ಹೀಗಿದೆ:

1. ನಿಷ್ಕಾಪಟ್ಯದಿಂದ, ಸರಳವಾಗಿ, ಮತ್ತು ಅಹಂಕಾರದ ಯಾವ ಕಾದಿರಿಸಿರು–ವಿಕೆಗಳೂ ಇಲ್ಲದೆ ಶ್ರೀಮಾತೆಯವರಿಗೆ ಇಡಿಯಾಗಿ ಶರಣಾಗಬೇಕು.
2. ನಿಮ್ಮ ಬಾಹ್ಯ ಸತ್ತೆಯಲ್ಲಿರುವ ರೂಢಿಗತ ದೋಷಗಳ ಬಗ್ಗೆ ಅರಿವುಳ್ಳವ–ರಾಗಬೇಕು ಮತ್ತು ಅವುಗಳನ್ನು ನಿರಾಕರಿಸಬೇಕು.
3. ಈ ಮಬ್ಬಾದ ಭಾಗಗಳನ್ನು ಪ್ರಕಾಶಕ್ಕೆ ತೆರೆದಿರಿಸಬೇಕು ಮತ್ತು ಅವುಗಳ ಚಲನೆಯನ್ನು ಬದಲು ಮಾಡಬೇಕು.

ತಿರುಚು ಇದೇ ಆಗಿತ್ತು. – ಕಾದಿರಿಸಿದ್ದೆಲ್ಲವನ್ನೂ ಬಿಟ್ಟುಕೊಡುವ ಮನಸ್ಸಿನ ಹೊರಳುವಿಕೆ – ಅದನ್ನು ದೈವೀ ಶಕ್ತಿಗೆ ಸಂಪೂರ್ಣ ಶರಣಾಗತಿ ಎಂದು ಅರ್ಥ ಮಾಡಲಿಕ್ಕಾಗುವುದಿಲ್ಲ, ಆದರೆ ಬಂದ ಏನೋ ಒಂದಕ್ಕೆ ನಿಮ್ಮ ಕೊಟ್ಟುಕೊಂಡ–ದ್ದಾಗಿರುತ್ತದೆ, ಅದು ನಿಮ್ಮ ಪ್ರಾಣಿಕ ಪ್ರಕೃತಿಯ ತಪ್ಪಾದ ಚಲನೆಯೇ ಆಗಿರಬಹುದು ಇಲ್ಲವೆ ವಿರೋಧೀ ಶಕ್ತಿಯೂ ಕೂಡ ಆಗಿರಬಹುದು.

ಈ ಬಗೆಯ ನಿಷ್ಕ್ರಿಯತೆ ಶರಣಾಗತಿಯ ಅರ್ಥವಲ್ಲ ಎಂದು ನಾನು ಮತ್ತೆ, ಮತ್ತೆ ಹೇಳಿದ್ದೇನೆ. ನೀವು ಒಂದೇ ವೇಳೆಗೆ ದೈವೀ ಶಕ್ತಿಗೆ ಮತ್ತು ವಿಶ್ವವ್ಯಾಪಿ ನಿಮ್ಮ ಪ್ರಕೃತಿಗೆ ಶರಣಾಗತರಾಗಲಾರಿರಿ. ಪ್ರತಿಯೊಂದೂ ಅವರ ಚಲನೆಯೆಂದು ಅಂಗೀಕರಿಸುವುದು ಈ ಯೋಗದ ಅರ್ಥ ಹಾಗೂ ಉದ್ದೇಶಗಳನ್ನು ವಿರೋಧಿಸಿದ

ಹಾಗೆ. ಶ್ರೀಮಾತೆಯವರಿಗೆ ಶರಣಾಗುವುದರ ಅರ್ಥ ಈ ಎಲ್ಲ ಇತರ ಶಕ್ತಿಗಳಿಗೆ ನಿಮ್ಮನ್ನು ಕೊಟ್ಟುಕೊಳ್ಳುವುದನ್ನು ನಿಲ್ಲಿಸಬೇಕೆಂದಿರುತ್ತದೆ. ಆದ್ದರಿಂದ ವ್ಯತ್ಯಾಸ ಗುರುತಿಸುವಿಕೆ (ಯೋಚಿಸುವ ಮನಸ್ಸಿನಿಂದ ಕೈಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ಚೈತ್ಯದ ಭಾವನೆಯಿಂದ, ನೋಡುವ ಅರಿವುಳ್ಳ ಮನಸ್ಸಿನಿಂದ ಕೈಕೊಂಡದ್ದು) ಮತ್ತು ನಿರಾಕರಣೆ ಇವು ಅವಶ್ಯವಾಗಿ ಜೊತೆಗಿರಬೇಕು, ಆಗ ಅದು ಮುಡಿಪಾಗಿರಿಸಿಕೊಳ್ಳುವಿಕೆಗೆ ಹಾಗೂ ಶರಣಾಗತಿಗೆ ಸಹಾಯಕವಾಗುತ್ತದೆ.

**CWSA, 32/148–49** **– ಶ್ರೀ ಅರವಿಂದರು**

*

ನಿಮ್ಮ ಹೃದಯದಲ್ಲಿ ಎಲ್ಲವನ್ನೂ ಶ್ರೀಮಾತೆಯವರ ಮುಂದಿರಿಸಿರಿ, ಅದರಿಂದಾಗಿ ಅವರ ದೈವೀ ಪ್ರಕಾಶ ಅದರ ಮೇಲೆ ಅತ್ಯಂತ ಒಳ್ಳೆಯ ರೀತಿಯಲ್ಲಿ ಕಾರ್ಯ ಮಾಡುವಂತಾಗುವುದು.

**CWSA, 32/147** **– ಶ್ರೀ ಅರವಿಂದರು**

*



ಏಕಾಗ್ರತೆಯನ್ನು ಕೈಕೊಳ್ಳುವುದರ ಹೊರತಾಗಿ ಈ ಯೋಗದಲ್ಲಿ ಬೇರೆ ಯಾವ ವಿಧಾನವೂ ಇಲ್ಲ, ಮೇಲಾಗಿ ಆ ಏಕಾಗ್ರತೆ ಹೃದಯದಲ್ಲಿರಬೇಕು ಮತ್ತು ಅಲ್ಲಿ ಶ್ರೀಮಾತೆಯವರ ಸಾನ್ನಿಧ್ಯ ಹಾಗೂ ಸಾಮರ್ಥ್ಯಗಳಿಗೆ ಕರೆ ಕೊಡಬೇಕು, ಆ ಕರೆ ಕೊಡುವಿಕೆ ಅವರು ಸತ್ತೆಯನ್ನು ಕೈಗೆತ್ತಿಕೊಂಡು ಅವರ ಕಾರ್ಯಗತಿಗಳ ಮೂಲಕ ಪ್ರಜ್ಞೆಯನ್ನು ಪರಿವರ್ತಿಸುವುದಕ್ಕಾಗಿ ಇರುತ್ತದೆ; ಶಿರದ ಮೇಲೆ, ಹುಬ್ಬುಗಳ ಮಧ್ಯದಲ್ಲಿಯೂ ಕೂಡ ಮನುಷ್ಯ ಏಕಾಗ್ರತೆಯನ್ನು ಕೈಕೊಳ್ಳಬಹುದು, ಆದರೆ ಅದು ಬಹಳ ಜನರಿಗೆ ಬಹಳ ಕಠಿಣ ರೀತಿಯ ತೆರೆದಿರಿಸಿಕೊಳ್ಳುವಿಕೆ–ಯಾಗಿರುತ್ತದೆ. ಮನಸ್ಸು ಅಚಂಚಲತೆಯಲ್ಲಿ ಉಳಿದುಕೊಂಡಾಗ, ಏಕಾಗ್ರತೆ ಬಲವತ್ತರವಾದಾಗ, ಮತ್ತು ಅಭೀಪ್ಸೆ ಗಾಢವಾದಾಗ ಅಲ್ಲಿ ಅನುಭವದ ಪ್ರಾರಂಭವಿರುತ್ತದೆ. ನಂಬಿಕೆ ಹೆಚ್ಚಾದ ಹಾಗೆ, ಪರಿಣಾಮ ಹೆಚ್ಚು ತೀವ್ರಗತಿಯದಾಗುವ ಸಂಭವವಿರುತ್ತದೆ. ಉಳಿದದ್ದಕ್ಕಾಗಿ ಮನುಷ್ಯ ಕೇವಲ ತನ್ನ ಪ್ರಯತ್ನಗಳ ಮೇಲೆ ಅವಲಂಬಿಸಿರಬಾರದು, ಆದರೆ ಭಗವಂತನೊಡನೆ ಸಂಪರ್ಕವನ್ನು ಸ್ಥಾಪಿಸುವುದರಲ್ಲಿ ಮತ್ತು ಶ್ರೀಮಾತೆಯವರ ದೈವೀ ಸಾಮರ್ಥ್ಯ ಹಾಗೂ ದೈವೀ ಸಾನ್ನಿಧ್ಯ ಇವುಗಳನ್ನು ಗ್ರಹಿಸುವುದರಲ್ಲಿ ಯಶಸ್ವಿಯಾಗಬೇಕು.

**CWSA, 29/107** **– ಶ್ರೀ ಅರವಿಂದರು**

*



"(ಆಧ್ಯಾತ್ಮಿಕ ಮಾರ್ಗದಲ್ಲಿ) ನಾನೆಷ್ಟು ದೂರ ಬಂದಿದ್ದೇನೆ, ನಾನಿನ್ನೂ ಅದೆಷ್ಟು ದೂರ ಸಾಗಬೇಕಾಗಿದೆ" ಇಂತಹ ಪ್ರಶ್ನೆಗಳು ಹೆಚ್ಚು ಪ್ರಯೋಜನಕಾರಿ ಆಗಿರುವುದಿಲ್ಲ. ಕಪ್ತಾನರಾಗಿರುವ ಶ್ರೀಮಾತೆಯವರೊಂದಿಗೆ ಮೇಲ್ಮುಖ ತರಂಗದಲ್ಲಿ ಈಜಾಡು, ಅವರು ನಿನ್ನ ಅದೃಷ್ಟವಿರುವ ಬಂದರಕ್ಕೆ ಕರೆದೊಯ್ಯುತ್ತಾರೆ.

*

ನೀನು ತಲುಪಬೇಕಾದುದು ಶ್ರೀಮಾತೆಯವರನ್ನು ಮಾತ್ರ. ಅವರು ತಮ್ಮಲ್ಲಿ ಪ್ರತಿಯೊಂದನ್ನು ಒಳಗೊಂಡಿದ್ದಾರೆ. ಅವರ ಪ್ರಜ್ಞೆಯಲ್ಲಿ ನೀನು ಉಳಿದುಕೊಂಡರೆ ಅಲ್ಲಿ ಪ್ರತಿಯೊಂದು ಸ್ವಯಂಚಾಲಿತ ಅರಳಿಕೊಳ್ಳುವಿಕೆಯಂತಿರುತ್ತದೆ.

**ಬಂಗಾಲಿ ಬರಹಗಳು, p. 412, 424 – ಶ್ರೀ ಅರವಿಂದರು**

*




**ಪ್ರಶ್ನೆ :** *ನಿಮ್ಮ ಯೋಗದ ಬಗ್ಗೆ ನನಗೇನೂ ತಿಳಿದಿಲ್ಲ, ನಾನು ಆ ಯೋಗವನ್ನು ಕೈಕೊಳ್ಳುವುದು ಹೇಗೆ? ಏನು ಕೈಕೊಳ್ಳಬೇಕೆಂಬುದೂ ಕೂಡ ನನಗೆ ತಿಳಿದಿಲ್ಲ.*

**ಶ್ರೀ ಅ :** ಯೋಗವನ್ನು ಆಚರಿಸಲು ಎರಡು ರೀತಿಗಳಿವೆ. ಒಂದು ಜ್ಞಾನ ಹಾಗೂ ಮನುಷ್ಯ ತನ್ನದೇ ಪ್ರಯತ್ನಗಳ ಮೂಲಕ ಕೈಕೊಳ್ಳುವಂತಹದು, ಇನ್ನೊಂದು

ಶ್ರೀಮಾತೆಯವರನ್ನು ನೆಚ್ಚಿಕೊಳ್ಳುವುದರ ಮೂಲಕ ಕೈಕೊಳ್ಳಬಹುದಾದದ್ದು. ಎರಡನೆಯ ರೀತಿಯಲ್ಲಿ ಮನುಷ್ಯ ತನ್ನ ಮನಸ್ಸು, ಹೃದಯ ಮತ್ತು ಎಲ್ಲವನ್ನೂ ಶ್ರೀಮಾತೆಯವರಿಗೆ ಅರ್ಪಿಸಬೇಕು, ಅವರ ದೈವೀ ಶಕ್ತಿ ಅದರ ಮೇಲೆ ಕಾರ್ಯಕೈಕೊಳ್ಳುವುದು, ತೊಂದರೆಗಳಿದ್ದಾಗ ಅವರಿಗೆ ಕರೆ ಕೊಡಬೇಕು, ಅವರಲ್ಲಿ ನಂಬಿಕೆ ಹಾಗೂ ಭಕ್ತಿಗಳನ್ನು ಹೊಂದಿರಬೇಕು. ಮೊದಲು ಅದಕ್ಕೆ ಹೆಚ್ಚಿನ ಸಮಯ ಬೇಕಾಗುತ್ತದೆ, ಪ್ರಜ್ಞೆಯನ್ನು ಈ ರೀತಿಯಲ್ಲಿ ತಯಾರು ಮಾಡಲು ಬಹಳಷ್ಟು ಸಲ ದೀರ್ಘ ಕಾಲ ಬೇಕಾಗುತ್ತದೆ. ಆ ಕಾಲದಲ್ಲಿ ಬಹಳಷ್ಟು ತೊಂದರೆಗಳು ಬರಬಹುದು, ಆದರೆ ಮನುಷ್ಯ ಪಟ್ಟುಹಿಡಿದು ಮುಂದುವರಿದಾಗ, ಎಲ್ಲವೂ ತಯಾರಾಗಿರುವ ಒಂದು ಸಮಯ ಬರುತ್ತದೆ, ಶ್ರೀಮಾತೆಯವರ ದೈವೀ ಶಕ್ತಿ ಪ್ರಜ್ಞೆಯನ್ನು ಪೂರ್ತಿಯಾಗಿ ಭಗವಂತನತ್ತ ತೆರೆದಿರಿಸುತ್ತದೆ, ಆಗ ಅಭಿವೃದ್ಧಿ ಹೊಂದಬೇಕಾದುದೆಲ್ಲ ಅಂತರಂಗದಲ್ಲಿ ಅಭಿವೃದ್ಧಿ ಹೊಂದುತ್ತದೆ, ಆಧ್ಯಾತ್ಮಿಕ ಅನುಭವ ಬರುತ್ತದೆ ಮತ್ತು ಅದರೊಂದಿಗೆ ಜ್ಞಾನ ಹಾಗೂ ಭಗವಂತನೊಂದಿಗೆ ಏಕತೆ ಬರುತ್ತದೆ.

**CWSA, 32/497** **– ಶ್ರೀ ಅರವಿಂದರು**

*

ಮಾತೆ ಹಾಗೂ ಮಗು ಇವರ ನಡುವಿರುವ ಸಂಬಂಧ ಇಡಿಯಾಗಿರು–ವಂತಹದು, ನಿಷ್ಕಾಪಟ್ಯದ್ದು, ಸರಳ ವಿಶ್ವಾಸವಿದ್ದದ್ದು, ಪ್ರೇಮವುಳ್ಳದ್ದು ಮತ್ತು ಅವಲಂಬನಕ್ಕೊಳಗಾದದ್ದು ಆಗಿರುತ್ತದೆ.

*

ನೀನು ಶ್ರೀಮಾತೆಯವರ ಮಗು, ಶ್ರೀಮಾತೆಯ ಪ್ರೇಮ ಅವಳ ಮಕ್ಕಳಿಗಾಗಿ ಮಿತಿರಹಿತವಾಗಿರುತ್ತದೆ, ಅವರು ಆ ಮಕ್ಕಳ ಸ್ವಭಾವದಲ್ಲಿರುವ ದೋಷಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳುತ್ತಾರೆ. ಶ್ರೀಮಾತೆಯವರ ನಿಜವಾದ ಮಗುವಾಗಲು ಪ್ರಯತ್ನಿಸು: ಅವರ ಪ್ರೇಮ ನಿನ್ನೊಳಗಿದೆ, ಆದರೆ ಬಾಹ್ಯ ಮನಸ್ಸು ಚಿಕ್ಕ, ವ್ಯರ್ಥ ವಿಷಯಗಳಲ್ಲಿ ಮಗ್ನವಾಗಿದೆ, ಬಹಳಷ್ಟು ಸಲ ಅವುಗಳ ಮೇಲೆ ಹಿಂಸಾತ್ಮಕವಾಗಿ ಹೆಚ್ಚಿನ ಗಮನವಿರಿಸುತ್ತದೆ.

*

ಶ್ರೀಮಾತೆಯವರಿಗೆ ಚೈತ್ಯಾತ್ಮಿಕವಾಗಿ ತೆರೆದಿರಿಸಿಕೊಂಡು ಉಳಿದುಕೊಳ್ಳುವುದರ ಮೂಲಕ ಕಾರ್ಯಕ್ಕೆ ಇಲ್ಲವೆ ಸಾಧನೆಗಾಗಿ ಅವಶ್ಯವಾದದ್ದೆಲ್ಲ ಪ್ರಗತಿಪರವಾಗಿ ಅಭಿವೃದ್ಧಿ ಹೊಂದುತ್ತದೆ, ಮುಖ್ಯವಾದ ರಹಸ್ಯಗಳಲ್ಲಿ ಅದೂ ಒಂದು, ಅದು ಸಾಧನೆಯ ಕೇಂದ್ರ ರಹಸ್ಯ.

*

ಸ್ಥಿರವಾಗಿ ಹಾಗೂ ಅಚಂಚಲತೆಯಿಂದ ಕುಳಿತುಕೊಂಡು ಶ್ರೀಮಾತೆಯವರನ್ನು ನೆನಪಿಗೆ ತಂದುಕೋ ಮತ್ತು ಅವರಿಗೆ ನಿನ್ನನ್ನು ತೆರೆದಿರಿಸು. ಇದು ಧ್ಯಾನ ಮಾಡುವುದರ ನಿಯಮ.

*

ಮಾತೆ ಹಾಗೂ ಮಗು ಇವರ ನಡುವಿರುವ ಸಂಪರ್ಕದ ಅರ್ಥ ಮಾತೆ ಮಗುವನ್ನು ಪ್ರೀತಿಸಬೇಕು ಎಂಬುದಷ್ಟೇ ಅಲ್ಲ, ಆದರೆ ಮಗು ಮಾತೆಯನ್ನು ಪ್ರೀತಿಸಬೇಕು ಹಾಗೂ ಅವಳಿಗೆ ವಿಧೇಯವಾಗಿರಬೇಕು. ನೀನು ಶ್ರೀಮಾತೆಯವರ ನಿಜವಾದ ಮಗುವಾಗಲು ಬಯಸುತ್ತೀ, ಆದರೆ ಅದಕ್ಕಾಗಿ ಮೊದಲ ವಿಷಯವೆಂದರೆ, ನಿನ್ನನ್ನು ಅವರ ಹಸ್ತಗಳಲ್ಲಿರಿಸಬೇಕು ಮತ್ತು ಅವರು ನಿನಗೆ ಮಾರ್ಗದರ್ಶನ ಮಾಡಲಿ, ನೀನು ಅವರ ಸಂಕಲ್ಪವನ್ನು ಅನುಸರಿಸುವಂತಾಗಲಿ – ಮತ್ತು ನೀನು ಅದನ್ನು ಕಡೆಗಣಿಸುವುದು ಬೇಡ ಇಲ್ಲವೆ ಅವರ ವಿರುದ್ಧ ಬಂಡಾಯವೇಳುವುದು ಬೇಡ.

ಮಗುವಿನ ಪ್ರಾಣಿಕ ಒತ್ತಾಯದಿಂದ ಬೇಡಿದ್ದನ್ನೆಲ್ಲ ಮಾಡದೆ ಇರುವುದು ಶ್ರೀಮಾತೆಯವರ ನಿಜವಾದ ಪ್ರೇಮದ ಭಾಗವಾಗಿರುತ್ತದೆ, ಏಕೆಂದರೆ ಅದು ಮಗುವಿಗೆ ಅತ್ಯಂತ ಕೆಟ್ಟದ್ದಾಗುತ್ತದೆಂಬುದು ಅವರಿಗೆ ತಿಳಿದಿರುತ್ತದೆ. ಪ್ರಾಣಿಕದ ಪ್ರಚೋದನೆಗೆ ವಿಧೇಯರಾಗಿರುವುದು ಬೇಡ, ಆದರೆ ಅದಕ್ಕೂ ಹೆಚ್ಚಾಗಿ ನಿಮ್ಮ ನಿಜವಾದ ಗ್ರಹಿಕೆಯನ್ನು ಅನುಸರಿಸಿರಿ ಮತ್ತು ನಿಮ್ಮನ್ನು ಶ್ರೀಮಾತೆಯವರ ಸಂಕಲ್ಪಕ್ಕೆ ವಾಹಿನಿಯೊಂದಾಗುವಂತೆ ಮಾಡಿರಿ – ಏಕೆಂದರೆ ನೀವು ನಿಮ್ಮ ನಿಜವಾದ ಸತ್ತೆಯಲ್ಲಿ ಬೆಳೆಯಬೇಕೆಂಬುದು, ಯಾವಾಗಲೂ, ಅವರ ಸಂಕಲ್ಪವಾಗಿರುತ್ತದೆ.

**CWSA, 32/460** **– ಶ್ರೀ ಅರವಿಂದರು**

*

## ವಾರ್ತಾಪತ್ರ

## ಶ್ರೀ ಅರವಿಂದೋ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 29ನೇ ಫೆಬ್ರವರಿ 2016ರ ಸೋಮವಾರದಂದು ಶ್ರೀ ಅರವಿಂದೋ ಸಂಕೀರ್ಣ ವತಿಯಿಂದ "ಸುವರ್ಣ" ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.00 ಗಂಟೆಯಿಂದ 7.30 ರವರೆಗೆ ಶ್ರೀ ಅರವಿಂದೋ ಧ್ಯಾನ ಮಂದಿರದಲ್ಲಿ ಸಾಮೂಹಿಕ ಧ್ಯಾನ ಏರ್ಪಡಿಸಲಾಗಿತ್ತು. ನಂತರ ಸಂದೇಶ ಪತ್ರ ವಿತರಿಸಲಾಯಿತು. ತತ್ಸಂಬಂಧ ಸಾಯಂಕಾಲ 5.00 ಗಂಟೆಯಿಂದ 6.30 ಗಂಟೆಯವರೆಗೆ ಶ್ರೀ ಕೋಟ ವೆಂಕಟೇಶ್ವರರಾವ್, ಪ್ರತಿನಿಧಿ, ಶ್ರೀ ಅರವಿಂದೋ ಸೊಸೈಟಿ ಕೇಂದ್ರ, ಖಮ್ಮಂ, ಆಂಧ್ರ ಪ್ರದೇಶ ಇವರು 'ಸುವರ್ಣ ದಿನ'ದ ಮಹತ್ವದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು, ಇತರರು ಆಗಮಿಸಿದ್ದರು.



*Thy smile within my heart*
*makes all my strength.*

- Sri Aurobindo

**RNI No. 22511/1971**
No. of Pages **44 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.